**ಸ್ಟ್ಯಾನ್‌ಫೋರ್ಡ್ಸ್ ಈ ತತ್ತ್ವಶಾಸ್ತ್ರದ ವಿಶ್ವಕೋಶ**

**ವಸಾಹತುಶಾಹಿ ಸಾಮಾಜಿಕ ವ್ಯವಸ್ಥೆ (ವಸಾಹತುಶಾಹಿ)**

**ಮೊದಲ ಪ್ರಕಟಣೆ ಮೇ-೯-೨೦೦೬ ಮಂಗಳವಾರ; ಸಾರಭೂತವಾದ ಪರಿಷ್ಕರಣೆ ಏಪ್ರಿಲ್-೧೦-೨೦೧೨, ಮಂಗಳವಾರ**

**ವಸಾಹತುಶಾಹಿ:-**

ಒಂದು ಜನಾಂಗವನ್ನು ಮತ್ತೊಂದು ಜನಾಂಗವು ತನ್ನ ಸ್ವಾಧೀನದಲ್ಲಿಟುಕೊಂಡು ಅವರನ್ನು ಆಳುವ ಪದ್ಧತಿಯೇ ವಸಾಹತುಶಾಹಿ. ವಸಾಹತುಶಾಹಿಯನ್ನು ಸಾಮ್ರಾಜ್ಯಶಾಹಿಯಿಂದ ಪ್ರತ್ಯೇಕವಾಗಿ ವಿವರಿಸುವುದು ಕಷ್ಟವಾಗುತ್ತದೆ. ಸಾಮಾನ್ಯವಾಗಿ ಈ ಎರಡು ಪರಿಕಲ್ಪನೆಗಳನ್ನು ಒಂದಕ್ಕೊಂದು ಪರ್ಯಾಯವೆಂಬಂತೆ ಬಳಸಲಾಗುತ್ತಿದೆ. ವಸಾಹತುಶಾಹಿಯಂತೆ ಸಾಮ್ರಾಜ್ಯಶಾಹಿಯೂ ಅವಲಂಬಿತ ಪ್ರದೇಶದ ಮೇಲೆ ರಾಜಕೀಯ ಮತ್ತು ಆಥಿರ್್ಥಕ ನಿಯಂತ್ರಣವನ್ನು ಹೊಂದಿರುತ್ತದೆ. ಏನೇ ಆದರೂ, ಈ ಎರಡು ಪದಗಳ ನಿಷ್ಪತ್ತಿಯು ಅವು ಪರಸ್ಪರ ಹೇಗೆ ಭಿನ್ನವೆಂಬುದರ ಸುಳಿವನ್ನು ನೀಡುತ್ತದೆ. ವಸಾಹತು (ಛಿಂಟಂಟಿಥಿ) ಎಂಬುದು ಲ್ಯಾಟಿನ್ ಭಾಷೆಯ ಕೋಲೊನಸ್ (ಛಿಂಟಂಟಿus) ಎಂಬ ಪದದಿಂದ ಬಂದುದಾಗಿದ್ದು, ಅದು ರೈತ ಎಂಬ ಅರ್ಥವನ್ನು ನೀಡುತ್ತದೆ. ವಸಾಹತು ನೀತಿಯ ಲಕ್ಷಣವೆಂದರೆ ಒಂದು ಪ್ರದೇಶದ ಜನರು ಇನ್ನೊಂದು ಪ್ರದೇಶಕ್ಕೆ ವಲಸೆಹೋಗಿ ಅಲ್ಲಿಯೇ ಶಾಶ್ವತವಾಗಿ ನೆಲೆಸುವುದು ಮತ್ತು ಹಾಗೆ ನೆಲೆಸಿದರೂ, ಅವರು ತಮ್ಮ ತಾಯಿನಾಡಿಗೇ ರಾಜಕೀಯ ನಿಷ್ಠೆಯನ್ನು ಹೊಂದಿರುತ್ತಾರೆ ಎಂಬುದನ್ನು ನಮಗೆ ತೋರಿಸಿಕೊಡುತ್ತದೆ. ಸಾಮ್ರಾಜ್ಯಶಾಹಿ ಎಂಬುದು ಲ್ಯಾಟಿನ್ ಪದವಾದ ಇಂಪೀರಿಯಮ್ (imಠಿeಡಿium) ಎಂಬ ಪದದಿಂದ ಬಂದಿದೆ. ಅದರ ಅರ್ಥ 'ಪರಮಾಧಿಕಾರ (ಸಾರ್ವಭೌಮಾಧಿಕಾರ).  ಹಾಗಾಗಿ ಸಾಮ್ರಾಜ್ಯಶಾಹಿ ಎಂಬ ಉಕ್ತಿಯು ಒಂದು ದೇಶದ ಜನತೆ ಇನ್ನೊಂದು ಇನ್ನೊಂದು ದೇಶದಲ್ಲಿ ನೆಲಸಿ ಅಲ್ಲಿ ತಮ್ಮ ಸಾರ್ವಭೌಮತ್ವವನ್ನು ಸ್ಥಾಪಿಸಿ, ಅಥವಾ ಇತರ ಪರೋಕ್ಷ ತಂತ್ರಗಳ ಮೂಲಕ ಆ ದೇಶದ ಮೇಲೆ ನಿಯಂತ್ರಣವನ್ನು ಸಾಧಿಸುವುದು ಎಂಬ ಅರ್ಥವನ್ನು ನೀಡುತ್ತದೆ.

ಪಾಶ್ಚಾತ್ಯ ರಾಜಕೀಯ ಮತ್ತು ನೈತಿಕ ತತ್ತ್ವಶಾಸ್ತ್ರಜ್ಞರಿಗೆ, ವಸಾಹತುಶಾಹಿಯ ನ್ಯಾಯ ಸಮ್ಮತತೆಯು ಒಂದು ದೀರ್ಘಕಾಲೀನ ಚಿಂತನೆಯ ವಿಷಯವಾಗಿತ್ತು. ಕಡೆಯ ಪಕ್ಷ ಕ್ರೈಸ್ತರ ಧರ್ಮಯುದ್ಧ ಹಾಗೂ ಅಮೆರಿಕಗಳ ಮೇಲಿನ ವಿಜಯದ ಅನಂತರದಲ್ಲಿ, ಪಶ್ಚಿಮೇತರ ಜನರ ಮೇಲೆ ಐರೋಪ್ಯರ ಸಾರ್ವಭೌಮತ್ವವನ್ನು ನ್ಯಾಯ ಮತ್ತು ಸಹಜ ನ್ಯಾಯಗಳೆಂಬ ಆದರ್ಶಗಳ ವಿಷಯದಲ್ಲಿ ಹೊಂದಾಣಿಕೆ ಮಾಡಲು ರಾಜಕೀಯ ಸಿದ್ಧಾಂತಿಗಳು ಬಹಳ ಕಷ್ಟಪಟ್ಟರು. ಹತ್ತೊಂಬತ್ತನೆಯ ಶತಮಾನದಲ್ಲಿ ಪ್ರಪಂಚದ ಇನ್ನುಳಿದ ಭಾಗಗಳ ಮೇಲೆ ಯೂರೋಪಿನ ಹಿಡಿತ ಪರಾಕಾಷ್ಠೆಯನ್ನು ಮುಟ್ಟಿದಾಗ ಉದಾರ ಚಿಂತನೆಗಳು ಹಾಗೂ ವಸಾಹತುಶಾಹಿ ನೀತಿಗಳ ನಡುವೆ ಇದ್ದ ಘರ್ಷಣೆ ಉಲ್ಬಣವಾಯಿತು.  ಆಭಾಸವೆಂದರೆ ಅದೇ ಸಮಯದಲ್ಲಿ ಸಾರ್ವತ್ರಿಕವಾದ ತತ್ವಗಳ ಮತ್ತು ಸಮಾನತೆಯ ಪರ ವಾದಿಸುತ್ತಿದ್ದ ಬಹುತೇಕ ರಾಜಕೀಯ ತತ್ತ್ವಶಾಸ್ತ್ರಜ್ಞರು ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿಯ ನ್ಯಾಯಸಮ್ಮತತೆಯನ್ನು ಸಹ ಸಮರ್ಥಿಸುತ್ತಿದ್ದರು. ಮೇಲ್ನೋಟಕ್ಕೆ ಕಂಡು ಬರುವಂತೆ, ಈ ವಿರುದ್ಧಾತ್ಮಕ ತತ್ತ್ವಗಳ ನಡುವೆ ಸಮನ್ವಯವನ್ನು ಸಾಧಿಸಲು ಐರೋಪ್ಯೇತರ ಅನಾಗರಿಕ ಜನತೆಯನ್ನು ನಾಗರಿಕರನ್ನಾಗಿಸಲು ಅವರು ಉದಾರವಾದಿ ಸಂಸ್ಥೆಗಳನ್ನು ಹಾಗೂ ಸ್ವಯಮಾಧಿಕಾರವನ್ನು ಪಾಲಿಸಿಕೊಂಡು ಹೋಗಲು ಸಮರ್ಥರಾಗುವ

ಕಾಲಾವಧಿಯವರೆಗೆ ತಾತ್ಕಾಲಿಕವಾಗಿ ಅವರಿಗೆ ಅವಲಂಬನೆಯನ್ನು ಅಥವಾ ಶಿಕ್ಷಣವನ್ನು ನೀಡಲು ಈ ವಸಾಹತುನೀತಿ ಆವಶ್ಯಕವೆಂಬ ವಾದವನ್ನು ಮುಂದಿಡಲಾಯಿತು.

ಪಾಶ್ಚಾತ್ಯ ರಾಜಕೀಯ ಸಿದ್ಧಾಂತ ಮತ್ತು ವಸಾಹತುಶಾಹಿಯ ಯೋಜನೆಗಳ ನಡುವಣ ಸಂಬಂಧಗಳನ್ನು ವಿಶ್ಲೇಷಣೆ ಮಾಡುವುದು ಈ ಲೇಖನದ ಉದ್ದೇಶವಾಗಿದೆ. ವಸಾಹತುಶಾಹಿಯ ಪರಿಕಲ್ಪನೆಯ ಸಮಗ್ರ ಚರ್ಚೆಯ ಅನಂತರ ಈ ಲೇಖನದ ಮೂರು ಮತ್ತು ನಾಲ್ಕನೆಯ ಭಾಗಗಳಲ್ಲಿ ಯೂರೋಪಿಯನ್ ಚಿಂತಕರು ಹೇಗೆ ರಾಜಕೀಯ ಆಧಿಪತ್ಯವನ್ನು ಸಮರ್ಥಿಸಿಕೊಂಡರು, ನ್ಯಾಯಸಮ್ಮತಗೊಳಿಸಿದರು ಮತ್ತು ಅದನ್ನು ಹೇಗೆ ಪ್ರಶ್ನಿಸಿದರು ಎಂಬುದನ್ನು ವಿವರಿಸಲಾಗಿದೆ. ಐದನೆಯ ಭಾಗದಲ್ಲಿ ಭಾರತದಲ್ಲಿನ ಬ್ರಿಟೀಷ್ ವಸಾಹತುಶಾಹಿಯನ್ನು ಕುರಿತ ಸ್ವತಃ ಮಾರ್ಕ್ಸ್ ಅವರ ಸಮರ್ಥನೆ ಲೆನಿನ್‌ರವರ ಸಾಮ್ರಾಜ್ಯಶಾಹಿ ವಿರೋಧಿ ಬರಹಗಳನ್ನು ಒಳಕೊಂಡ ಮಾರ್ಕ್ಸ್ ವಾದಿ ಪರಂಪರೆಯನ್ನು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ. ಅಂತಿಮ ಭಾಗದಲ್ಲಿ, ಸಮಕಾಲೀನ "ವಸಾಹತೋತ್ತರಸಿದ್ಧಾಂತ" ದ ಪರಿಚಯವನ್ನು ಮಾಡಿಸಲಾಗಿದೆ. ವಸಾಹತೋತ್ತರ ಕಾಲದಲ್ಲಿ ವ್ಯಕ್ತಿನಿಷ್ಠವಿಚಾರಗಳು ಹುಟ್ಟಿಕೊಂಡು ವಸಾಹತುಶಾಹಿ ನೀತಿಯನ್ನು ಹಲವಾರು ತಾರ್ಕಿಕ ಹಾಗೂ ವೈಚಾರಿಕ ರೀತಿಯಲ್ಲಿ ವಿರೋಧಿಸಿದವು ಎಂಬುದರತ್ತ ನಮ್ಮ ಗಮನವನ್ನು ಸೆಳೆದವು ಎಂಬ ಕಾರಣದಿಂದ ಈ ವಿಭಾಗವು ಸಾಹಿತ್ಯಿಕ ಅಧ್ಯಯನಗಳಲ್ಲಿ ವಿಶೇಷವಾಗಿ ಪ್ರಭಾವಶಾಲಿಯಾಗಿದೆ. .ಐರೋಪ್ಯ ವಸಾಹತೀಕರಣದ ಅನುಭವದಿಂದ ಹೊರಹೊಮ್ಮಿದ ಸೈದ್ಧಾಂತಿಕ ಅಂಶಗಳನ್ನು ಶೋಧಿಸುವ ವಿಸ್ತಾರವಾದ ಮತ್ತು ಸಂಕೀರ್ಣವಾದ ಸಾಹಿತ್ಯದ ಸ್ಥೂಲ ಸಮೀಕ್ಷೆಯನ್ನು ಒದಗಿಸುವುದು ಈ ಲೇಖನದದ ಉದ್ದೇಶವಾಗಿದೆ.

1. ವಿವರಣೆ ಮತ್ತು ರೂಪರೇಖೆ
2. ಸಹಜ ನ್ಯಾಯ ಮತ್ತು ಸಂಶೋಧನೆಗಳ ಯುಗ
3. ಉದಾರವಾದ ಮತ್ತು ಸಾಮ್ರಾಜ್ಯ
4. ಮಾರ್ಕ್ಸ್‌ವಾದ ಮತ್ತು ಲೆನಿನ್‌ವಾದ
5. ವಸಾಹತೋತ್ತರ ಸಿದ್ಧಾಂತ
6. ಗ್ರಂಥಸೂಚಿ
7. ಶೈಕ್ಷಣಿಕ ಸಾಧನಗಳು
8. ಇತರ ಅಂತರ್ಜಾಲ ಆಕರಗಳು
9. ಸಂಬಂಧಿತ ವಿಷಯಗಳು

೧. ವಿವರಣೆ ಮತ್ತು ರೂಪರೇಖೆ:-

ವಸಾಹತುಶಾಹಿಯೇನೂ ಆಧುನಿಕ ವಿದ್ಯಮಾನವಲ್ಲ. ಒಂದು ಸಮಾಜವು ತಾನು ಹೊಸದಾಗಿ ಜಯಿಸಿದ ಪ್ರದೇಶಗಳಲ್ಲಿ ತನ್ನ ಪ್ರದೇಶದ ಜನಗಳನ್ನು ಅಲ್ಲಿ ನೆಲೆಗೊಳ್ಳುವಂತೆ ಮಾಡಿ ತನ್ನ ಗಡಿಗಳನ್ನು ಕ್ರಮೇಣವಾಗಿ ವಿಸ್ತರಿಸಿಕೊಂಡದ್ದಕ್ಕೆ ಅಕ್ಕಪಕ್ಕದ ಪ್ರದೇಶಗಳನ್ನು ವಶಪಡಿಸಿಕೊಂಡು ಕ್ರಮೇಣವಾಗಿ ವಿಸ್ತರಿಸಿದುದಕ್ಕೆ ವಿಶ್ವದ ಇತಿಹಾಸದಲ್ಲಿ ಸಾಕಷ್ಟು ಉದಾಹರಣೆಗಳು ದೊರೆಯುತ್ತವೆ. ಪ್ರಾಚೀನ ಗ್ರೀಕರು, ರೋಮನ್ನರು, ಮೂರ್ ಹಾಗೂ

ಒಟೋಮನ್ ಜನರು ತಮ್ಮ ತಮ್ಮ ಸಾಮ್ರಾಜ್ಯಗಳನ್ನು ವಿಸ್ತರಿಸಿದುದು, ಕೆಲವೊಂದು ಹೆಸರಿಸಬಹುದಾದ ಪ್ರಸಿದ್ಧವಾದ ಉದಾಹರಣೆಗಳಾಗಿವೆ. ವಸಾಹತುಶಾಹಿಯು ಒಂದು ನಿರ್ದಿಷ್ಟ ಸ್ಥಳ ಹಾಗೂ ಕಾಲಕ್ಕೆ ಸೀಮಿತವಾದುದಲ್ಲ. ಅದೇನೇ ಇದ್ದರೂ ಹದಿನಾರನೆಯ ಶತಮಾನದಲ್ಲಿ ಸಮುದ್ರಯಾನದಲ್ಲಿನ ತಾಂತ್ರಿಕ ಬೆಳವಣಿಗೆಗಳಿಂದಾಗಿ ವಿಶ್ವದ ಅತಿ ದೂರದ ಭಾಗಗಳು ಸಹ ಸಂಪರ್ಕವನ್ನು ಸಾಧಿಸುವಂತಾಯಿತು. ಅತಿ ವೇಗವಾಗಿ ಚಲಿಸುವ ಹಡಗುಗಳು ಅತಿದೂರದ ಬಂದರುಗಳನ್ನು ಶೀಘ್ರವಾಗಿ ಸೇರುವುದನ್ನು ಮತ್ತು ವಸಾಹತುಗಳು ತಮ್ಮ ಕೇಂದ್ರದೊಂದಿಗೆ ನಿಕಟವಾದ ಸಂಪರ್ಕ ಹೊಂದುವುದನ್ನು ಸಾಧ್ಯಮಾಡಿದವು. ಇದರಿಂದ ಸಾಮ್ರಾಜ್ಯಶಾಹಿಯು ನಿರ್ಣಾಯಕವಾಗಿ ಬದಲಾಯಿತು. ಭೌಗೋಳಿಕವಾಗಿ ಅಂತರವಿದ್ದರೂ, ಬಹಳಷ್ಟು ಮಂದಿ ಜನರನ್ನು ಸಾಗರದಾಚೆ ನೆಲೆಸುವಂತೆ ಮಾಡಿ ರಾಜಕೀಯ ಸಾರ್ವಭೌಮತ್ವವನ್ನು ನಿರ್ವಹಿಸುವ ಸಾಧ್ಯತೆಯುಂಟಾದುದರಿಂದ ಆಧುನಿಕ ಐರೋಪ್ಯ ವಸಾಹತುಶಾಹಿ ಯೋಜನೆ ಹುಟ್ಟಿಕೊಂಡಿತು. ಅಮೇರಿಕಗಳನ್ನೂ ಒಳಗೊಂಡಂತೆ ಆಸ್ಟ್ರೇಲಿಯ, ಆಫ್ರಿಕ ಹಾಗೂ ಏಷ್ಯಾದ ವಿವಿಧ ಭಾಗಗಳಲ್ಲಿ ಯೂರೋಪಿಯನ್ನರು ನೆಲೆಸುವಂತೆ ಮಾಡಿ, ಆ ಎಲ್ಲಾ ದೇಶಗಳಲ್ಲಿಯೂ ತಮ್ಮ ರಾಜಕೀಯ ನಿಯಂತ್ರಣವನ್ನು ಸಾಧಿಸುವಂತೆ ಮಾಡಿದ ಪ್ರಕ್ರಿಯೆಯನ್ನು ವಿವರಿಸಲು ವಸಾಹತುಶಾಹಿ ಎಂಬ ಉಕ್ತಿಯನ್ನು ಈ ಲೇಖನದಲ್ಲಿ ಬಳಸಲಾಗಿದೆ.

ಸಾಮ್ರಾಜ್ಯಶಾಹಿ ಎಂಬ ಉಕ್ತಿಗೆ ಸಮಾನಾರ್ಥಕವಾಗಿ 'ವಸಾಹತುಶಾಹಿ' ಯನ್ನು ಬಳಸುವುದರಿಂದ ಅದನ್ನು ವ್ಯಾಖ್ಯಾನಿಸಲು ತೊಡಕುಂಟಾಗುತ್ತದೆ. ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿ ಇವೆರಡೂ ಆಕ್ರಮಣದ ಸ್ವರೂಪಗಳಾಗಿದ್ದು ಆರ್ಥಿಕವಾಗಿ ಮತ್ತು ಭೌಗೋಳಿಕ ಆಯಕಟ್ಟಿನ ದೃಷ್ಟಿಯಿಂದ ಅವು ಯೂರೋಪಿಗೆ ಲಾಭದಾಯಕವೆಂದು ನಿರೀಕ್ಷಿಸಲಾಗಿತ್ತು. ಉತ್ತರ ಅಮೆರಿಕ, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಆಲ್ಜೀರಿಯ ಮತ್ತು ಬ್ರೆಜಿಲ್‌ನ ವಸಾಹತುಗಳು ಅಲ್ಲಿ ಶಾಶ್ವತವಾಗಿ ನೆಲೆಸಿದ್ದ ಬಹುದೊಡ್ಡ ಐರೋಪ್ಯ ನಿವಾಸಿಗಳ ನಿಯಂತ್ರಣದಲ್ಲಿರುವುದನ್ನು ವಿವರಿಸಲು ವಸಾಹತುಶಾಹಿ ಎಂಬ ಉಕ್ತಿಯನ್ನು ಪದೇ ಪದೇ ಬಳಸಲಾಗುತ್ತದೆ. ವಿದೇಶಿ ಸರ್ಕಾರವೊಂದು ಇತರ ಪ್ರದೇಶವೊಂದರಲ್ಲಿ ತನ್ನ ನಾಡಿನ ನಿವಾಸಿಗಳು ಮಹತ್ವಪೂರ್ಣ ನೆಲಸುನಾಡನ್ನು ಹೊಂದಿಲ್ಲದಿದ್ದರೂ ಅಲ್ಲಿ ಆಡಳಿತ ನಡೆಸುತ್ತಿದ್ದರೆ ಅದನ್ನು ಸೂಚಿಸಲು ಸಾಮ್ರಾಜ್ಯಶಾಹಿ ಎಂಬ ಉಕ್ತಿಯನ್ನು ಬಳಸಲಾಗುತ್ತದೆ. ್ತಹತ್ತೊಂಬತ್ತನೆಯ ಶತಮಾನದ ಕೊನೆಯ ವರ್ಷಗಳಲ್ಲಿ ಆಫ್ರಿಕಕ್ಕೋಸ್ಕರ ನಡೆದ ಮೇಲಾಟ ಹಾಗೂ ಫಿಲಿಫೈನ್ಸ್ ಮತ್ತು ಪೋರ್ಟೋರಿಕೊ ಮೇಲಿನ ಅಮೆರಿಕದ ಪ್ರಾಬಲ್ಯ ಇವುಗಳು ಸಾಮ್ರಾಜ್ಯಶಾಹಿಗೆ ವಿಶಿಷ್ಟ ಉದಾಹರಣೆಯಾಗಿದೆ. ಆದರೂ ಈ ಇವೆರಡರ ನಡುವಣ ವ್ಯತ್ಯಾಸವನ್ನು ಸಾಹಿತ್ಯವು ಕಂಡುಕೊಂಡ ಬಗೆಯಲ್ಲಿ ವ್ಯತ್ಯಾಸಗಳಿವೆ. ನೆಲೆಸುವ ಸಲುವಾಗಿ ಕಟ್ಟಿದ ವಸಾಹತು ಮತ್ತು ಆರ್ಥಿಕ ಶೋಷಣೆಗಾಗಿ ಕಟ್ಟಿದ ವಸಾಹತು ಎಂದು ಕೆಲವು ವಿದ್ವಾಂಸರು ಇದನ್ನು ವಿಂಗಡಿಸಿದ್ದಾರೆ. ಇತರರು ವಿದೇಶಿ ರಾಷ್ಟ್ರವೊಂದು ತಾನು ಆಕ್ರಮಿಸಿಕೊಂಡ ಪ್ರದೇಶಗಳಲ್ಲಿ ನೇರವಾಗಿ ಆಳ್ವಿಕೆ ನಡೆಸುವುದನ್ನು ವಸಾಹತುಶಾಹಿಯೆಂದು ಬಳಸುತ್ತಾರೆ. ಅಂತಹವರು ಪರೋಕ್ಷ ಆಧಿಪತ್ಯದ ಸ್ವರೂಪಗಳನ್ನೊಳಗೊಂಡ ಸಾಮ್ರಾಜ್ಯಶಾಹಿಯನ್ನು ಇದರಿಂದ ಬೇರೆಯೇ ಆಗಿ ನೋಡುತ್ತಾರೆ.

ಸಾಮ್ರಾಜ್ಯಶಾಹಿ ಉಕ್ತಿಯ ಬಗೆಗೆ ಇರುವ ಗೊಂದಲವು ಈ ಪರಿಕಲ್ಪನೆಯು ಕಾಲಕ್ರಮೇಣ ಹೇಗೆ ಬದಲಾಯಿತೆಂಬುದನ್ನು ಪ್ರತಿಬಿಂಬಿಸುತ್ತದೆ. ಹತ್ತೊಂಬತ್ತನೆಯ ಶತಮಾನಕ್ಕೆ ಮೊದಲು ಸಾಮ್ರಾಜ್ಯಶಾಹಿ (ಇಂಪೀರಿಯಲಿಸಂ) ಎಂಬ ಆಂಗ್ಲ ಪದವನ್ನು ಸಾಮಾನ್ಯವಾಗಿ ಬಳಸುತ್ತಿರಲಿಲ್ಲವಾದರೂ ಅಷ್ಟು ಹೊತ್ತಿಗಾಗಲೇ ಎಲಿಜಬತೀಯನ್ನರು ಯುನೈಟೆಡ್ ಕಿಂಗ್‌ಡಮ್‌ನ್ನು "ಬ್ರಿಟಿಷ್‌ಸಾಮ್ರಾಜ್ಯ" ವೆಂದು ವರ್ಣಿಸುತ್ತಿದ್ದರು. ಬ್ರಿಟನ್

ದೇಶವು ಸಾಗರೋತ್ತರದ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಪ್ರಾರಂಭಿಸಿದ ಅನಂತರ ಸಾಮ್ರಾಜ್ಯವೆಂಬ ಪರಿಕಲ್ಪನೆಯನ್ನು ಹೆಚ್ಚು ಹೆಚ್ಚಾಗಿ ಬಳಸಲಾಗುತ್ತಿತ್ತು. ಸಾಮ್ರಾಜ್ಯಶಾಹಿಯೆಂದರೆ ಮಿಲಿಟರಿ ಆಧಿಪತ್ಯದ ವ್ಯವಸ್ಥೆ ಮತ್ತು ಇತರ ಪ್ರದೇಶಗಳ ಮೇಲಿನ ತನ್ನ ಸಾರ್ವಭೌಮತ್ವ ಎಂಬಂತಾಯಿತು. ಸರ್ಕಾರದ ದೈನಂದಿನ ಆಡಳಿತಗಳನ್ನು ಪರೋಕ್ಷವಾಗಿ ಸ್ಥಳೀಯ ಸಂಸ್ಥೆಗಳ ಅಥವಾ ಇನ್ನಿತರ ಕಪ್ಪ ಸಲ್ಲಿಸುವ ಸ್ಥಳೀಯ ಆಳರಸರ ಮೂಲಕ ನಿರ್ವಹಿಸಿದರೂ, ಸಾರ್ವಭೌಮತ್ವ ಬ್ರಿಟಿಷರ ಬಳಿಯಿರುತ್ತಿತ್ತು. ಸಾಮ್ರಾಜ್ಯಶಾಹಿಯ ಬಗೆಗಿನ ಈ ಸಾಂಪ್ರದಾಯಿಕ ತಿಳುವಳಿಕೆ, ಆರ್ಥಿಕ ಶೋಷಣೆಯ ಗುರಿಯನ್ನು ಹೊಂದಿರುವ ಒಂದು ವ್ಯವಸ್ಥೆ ಎಂಬ ಲೆನಿನ್ ಅವರ ವಿಶ್ಲೇಷಣೆಯಿಂದ ಪ್ರಭಾವಿತಗೊಂಡಿತು. ಸಾಮ್ರಾಜ್ಯಶಾಹಿ-ಯೆಂಬುದರ ಅರ್ಥ ಆರ್ಥಿಕ ಶೋಷಣೆಯ ಗುರಿಯನ್ನು ಹೊಂದಿರುವ ಒಂದು ವ್ಯವಸ್ಥೆ ಎಂಬ ಲೆನಿನ್ ಅವರ ವಿಶ್ಲೇಷಣೆಯ ಪ್ರಭಾವದಿಂದ ಇಂದಿನ ಬಂಡವಾಳಶಾಹಿಯ ಬಂಡವಾಳ ಸಂಚಯನ ತರ್ಕದ ಆವಶ್ಯಕ ಮತ್ತು ಅನಿವಾರ್ಯ ಫಲಿತಾಂಶವೇ ಸಾಮ್ರಾಜ್ಯಶಾಹಿ ವ್ಯವಸ್ಥೆ. ಹಾಗಾಗಿ ಲೆನಿನ್ ಮತ್ತು ಅವರ ತರುವಾಯ ಬಂದ ಮಾರ್ಕ್ಸ್ವಾದಿಗಳು ಸಾಮ್ರಾಜ್ಯಶಾಹಿ- ಯೆಂದರೆ ಅದು ಇತಿಹಾಸದಲ್ಲಿ ಬಂಡವಾಳಶಾಹಿಯ ಒಂದು ಹಂತವೆಂದು ವರ್ಣಿಸುತ್ತಾರೆ. ಅವರ ದೃಷ್ಟಿಯಲ್ಲಿ ಅದು ಇತಿಹಾಸದ ಉದ್ದಕ್ಕೂ ಕಾಣಿಸುತ್ತಿರುವ ರಾಜಕೀಯ ಮತ್ತು ಮಿಲಿಟರಿ ಪ್ರಾಬಲ್ಯದ ಪ್ರಕ್ರಿಯೆಯಷ್ಟೇ ಅಲ್ಲ. ಅಮೆರಿಕನ್ ಸಾಮ್ರಾಜ್ಯಶಾಹಿಯ ಬಗೆಗಿನ ಸಮಕಾಲೀನ ಚರ್ಚೆಗಳಲ್ಲಿ ಮಾರ್ಕ್ಸ್ವಾದಿ ಧೋರಣೆಯ ಪ್ರಭಾವ ಈಗಲೂ ಮುಂದುವರಿಯುತ್ತಿರುವುದು ಕಂಡುಬರುತ್ತಿದೆ. ಇತರ ದೇಶಗಳ ಮೇಲೆ ತನ್ನ ಆಧಿಪತ್ಯವನ್ನು - ಅದನ್ನು ನೇರವಾಗಿ ಬಳಸಲಿ, ಅಥವ ಪರೋಕ್ಷವಾಗಿ ಉಪಯೋಗಿಸಲಿ, ಅಮೆರಿಕನ್ ಸಾಮ್ರಾಜ್ಯಶಾಹಿ ಎಂಬ ಉಕ್ತಿಯು ಅಮೆರಿಕನ್ ಆರ್ಥಿಕ ಆಧಿಪತ್ಯವೆಂಬ ಅರ್ಥವನ್ನು ಕೊಡುತ್ತದೆ (ಯಂಗ್೨೦೦೧).

ಈ ಎರಡೂ ಉಕ್ತಿಗಳ ನಡುವೆ ಇರುವ ವ್ಯತ್ಯಾಸವನ್ನು ಗುರುತಿಸುವ ಕಾರ್ಯವು ಕಷ್ಟದಾಯಕವಾಗಿದ್ದರೂ, ೧೬ನೆಯ ಶತಮಾನದಿಂದ ೨೦ನೆಯ ಶತಮಾನದವರೆಗೂ, ಅಂದರೆ ೧೯೬೦ರ ದಶಕದಲ್ಲಿ ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಗಳು ಅಂತ್ಯಗೊಳ್ಳುವವರೆಗೂ, ಇತರ ದೇಶಗಳ ಮೇಲೆ ಇದ್ದ ಯೂರೋಪಿಯನ್ನರ ರಾಜಕೀಯ ಆಧಿಪತ್ಯ ಎಂಬ ವಿಶಾಲಾರ್ಥದಲ್ಲಿ ವಸಾಹತು ಎಂಬ ಉಕ್ತಿಯನ್ನು ಈ ಲೇಖನದಲ್ಲಿ ಬಳಸಲಾಗಿದೆ. ರಾಜಕೀಯ ದಾಸ್ಯದಿಂದ ಸಾರ್ವಭೌಮತ್ವದೆಡೆಗಿನ ಸ್ಥಿತ್ಯಂತರವನ್ನು ಅನುಭವಿಸಿದ ಸಮಾಜಗಳ ರಾಜಕೀಯ ಮತ್ತು ಸೈದ್ಧಾಂತಿಕ ಹೋರಾಟಗಳನ್ನು ವಿವರಿಸಲು ವಸಾಹತೋತ್ತರವೆಂಬ ಉಕ್ತಿಯನ್ನು ಬಳಸಲಾಗಿದೆ. ಇಲ್ಲಿ ಸಾಮ್ರಾಜ್ಯಶಾಹಿಯೆಂಬ ಉಕ್ತಿಯನ್ನು ಸಹ ವಿಶಾಲವಾದ ಅರ್ಥದಲ್ಲಿ ಬಳಸಲಾಗಿದೆ. ಯೂರೋಪಿಯನ್ನರು ಹೆಚ್ಚಿನ ಸಂಖ್ಯೆಯಲ್ಲಿ ಶಾಶ್ವತ ನಿವಾಸಿಗಳಾಗಿಲ್ಲದಿದ್ದರೂ ಅವರು ಹೊಂದಿದ್ದ ಆರ್ಥಿಕ, ಮಿಲಿಟರಿ ಹಾಗೂ ರಾಜಕೀಯ ಆಧಿಪತ್ಯವನ್ನು ಸೂಚಿಸಲು ಇದನ್ನು ಬಳಸಲಾಗಿದೆ.

೨. ಸಹಜ ನ್ಯಾಯ ಮತ್ತು ಸಂಶೋಧನೆಗಳ ಯುಗ:-

ಅಮೇರಿಕ ಖಂಡಗಳ ಮೇಲಿನ ಸ್ಪಾನಿಷ್ ಜಯಭೇರಿಯು ಬೇರೆ ಪ್ರದೇಶಗಳ ನಿಯಂತ್ರಣ ಹೊಂದಲು ಮಿಲಿಟರಿ ಬಲವನ್ನು ಉಪಯೋಗಿಸುವುದರ ಬಗೆಗೆ ಒಂದು ದೊಡ್ಡ ರಾಜಕೀಯ, ನೈತಿಕ ಹಾಗೂ ಧಾರ್ಮಿಕ ಆಯಾಮಗಳನ್ನುಳ್ಳ ಚರ್ಚೆಗೆ ಎಡೆ ಮಾಡಿಕೊಟ್ಟಿತು. ಈ ಚರ್ಚೆಯು ಒಂದು ಧಾರ್ಮಿಕ ಚೌಕಟ್ಟಿನಲ್ಲಿ ನಡೆದು ಆಯಾ ದೇಶದ ಸ್ಥಳೀಯ ಜನರನ್ನು ಮತಾಂತರಿಸಿ ಅವರಿಗೆ ಮೋಕ್ಷದ ಮಾರ್ಗವನ್ನು ಸುಗಮಗೊಳಿಸುವುದಕ್ಕಾಗಿ ನಡೆಸಿದ ಮಿಲಿಟರಿ ಕಾರ್ಯಾಚರಣೆಯು ನ್ಯಾಯಸಮ್ಮತವಾದುದೆಂದು ಪರಿಗಣಿಸಲಾಯಿತು. “ನಾಗರಿಕರನ್ನಾಗಿಸುವ ಕಾರ್ಯಾಚರಣೆ” ಯಾವ ರೀತಿಯಿಂದಲೂ ಬ್ರಿಟಿಷರು ಹತ್ತೊಂಬತ್ತನೆಯ ಶತಮಾನದಲ್ಲಿ ನೀಡಿದ

ಸಮರ್ಥನೆಯಾಗಿರಲಿಲ್ಲ. ಸ್ಪಾನಿಷ್ ಆಕ್ರಮಣಕಾರರು ಮತ್ತು ವಸಾಹತುಶಾಹಿಗಳು ಅಮೆರಿಕಗಳಲ್ಲಿನ ತಮ್ಮ ಚಟುವಟಿಕೆಗಳು ಸ್ಥಳೀಯ ಜನರಿಗೆ ಕ್ರೈಸ್ತ ಧರ್ಮವನ್ನು ನೀಡುವ ಧಾರ್ಮಿಕ ಧ್ಯೇಯವನ್ನು ಹೊಂದಿದೆಯೆಂದು ಸ್ಪಷ್ಟವಾಗಿ ಸಮರ್ಥಿಸಿಕೊಂಡಿದ್ದಾರೆ. ಗೆಲ್ಲುವಿಕೆಗಳನ್ನು ತರ್ಕಸಂಗತಗೊಳಿಸಿದ ಮತ್ತು ವಿಧರ್ಮಿ ದೇಶಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ಅಗತ್ಯವಾದ ಒಂದು ನ್ಯಾಯಿಕ ಸಿದ್ಧಾಂತವನ್ನು ರೂಪಿಸಲು ಈ ಧರ್ಮಯುದ್ಧಗಳು ಪ್ರಾರಂಭಿಕ ಉತ್ತೇಜನವನ್ನು ನೀಡಿದ್ದವು. ಈ 'ಧರ್ಮಯುದ್ಧಗಳನ್ನು' ಪ್ರಾರಂಭದಲ್ಲಿ ಕ್ರೈಸ್ತೇತರರು ಗೆದ್ದಿರುವ ಕ್ರೈಸ್ತಪ್ರದೇಶಗಳನ್ನು ಮರಳಿ ಪಡೆಯುವ ಸಲುವಾಗಿ ನಡೆಸಿದ ಸ್ವರಕ್ಷಣೆಯ ಯುದ್ಧಗಳೆಂದು ಹೇಳಲಾಯಿತು. ಇದರ ಫಲಿತಾಂಶವಾಗಿ ಬಂದ ಸೈದ್ಧಾಂತಿಕ ಆವಿಷ್ಕಾರಗಳು ಅಮೆರಿಕಗಳ ಮೇಲಿನ ವಿಜಯವನ್ನು ಸಮರ್ಥಿಸುವ ಅನಂತರದ ಪ್ರಯತ್ನಗಳಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ಜೀಸಸ್ ಕ್ರೈಸ್ತನ ಅನುಯಾಯಿಗಳ ರಕ್ಷಣೆಯನ್ನು ಮಾಡಬೇಕೆಂದು ಹೇಳುವ 'ಪೀಟರನ ಆದೇಶ'ವು ಎಲ್ಲಾ ಲೌಕಿಕ ಮತ್ತು ಆಧ್ಯಾತ್ಮಿಕ ವಿಷಯಗಳಲ್ಲಿ ಪೋಪನ ಅಧಿಕಾರ ವ್ಯಾಪ್ತಿ ಇರಬೇಕು ಮತ್ತು ಕ್ರೈಸ್ತ ಧರ್ಮದ ಹೊರಗೆ ಇರುವವರ ವಿಷಯದಲ್ಲಿಯೂ ಈ ನಿಯಂತ್ರಣವು ಇರತಕ್ಕದ್ದು ಎಂದು ವಿಧಿಸುತ್ತದೆ.

ಏನೇ ಆದರೂ ಸ್ಥಳೀಯ ಜನರ ಮತಾಂತರವು ಸಾಗರೋತ್ತರ ಜಯಭೇರಿಗಳ ಯೋಜನೆಗೆ ನಿರಾತಂಕವಾದ ಸಮರ್ಥನೆಯನ್ನು ಒದಗಿಸಲಿಲ್ಲ. ಏಕೆಂದರೆ, ಆ ಸುಧಾರಣೆಯ ಕಾಲಘಟ್ಟದಲ್ಲಿ ಕ್ರೈಸ್ತಧರ್ಮದೊಳಗಿನ ಮಾನವತಾವಾದಿ ವಿದ್ವಾಂಸರುಗಳು ಸಂತ ಥಾಮಸ್ ಅಕ್ವಿನಾಸ್ ಅವರಂಥ ಧಾರ್ಮಿಕ ಪಂಡಿತರ ಸಹಜ ನ್ಯಾಯ ಸಿದ್ಧಾಂತಗಳಿಂದ ಹೆಚ್ಚು ಸಿದ್ಧಾಂತಗಳಿಂದ ಹೆಚ್ಚು ಪ್ರಭಾವಿತರಾಗಿದ್ದ ಸಂದರ್ಭದಲ್ಲಿ, ಸ್ಪ್ಯಾನಿಷರು ಅಮೆರಿಕಗಳ ಮೇಲೆ ಗೆಲುವು ಸಾಧಿಸಿದರು. ನಾಲ್ಕನೇ ಪೋಪ್ ಇನೊಸೆಂಟ್‌ರವರ ಪ್ರಕಾರ ಕ್ರೈಸ್ತೇತರರಿಗೆ ನಂಬಿಕೆಯಿಲ್ಲವೆಂಬ ಕಾರಣವೊಂದರಿಂದಲೇ ಅವರ ಮೇಲೆ ಯುದ್ಧ ಮಾಡಬಾರದು ಮತ್ತು ಅವರ ಆಸ್ತಿಪಾಸ್ತಿಗಳನ್ನು ವಶಪಡಿಸಿಕೊಳ್ಳಬಾರದು. ಥಾಮಸ್ ಅಕ್ವಿನಾಸ್ ಅವರ ವಾದದ ಪ್ರಭಾವದಿಂದಾಗಿ ನಾಲ್ಕನೆಯ ಇನೊಸೆಂಟ್ ಅವರು ಕ್ರೈಸ್ತೇತರರು ಸಹಜ ನ್ಯಾಯದ ನಿಯಮಗಳನ್ನು ಉಲ್ಲಂಘಿಸಿದ ಸಂದರ್ಭದಲ್ಲಿ ಮಾತ್ರ ಬಲಪ್ರಯೋಗಕ್ಕೆ ನ್ಯಾಯಸಮ್ಮತತೆ ಬರುತ್ತದೆ ಎಂಬ ತೀರ್ಮಾನಕ್ಕೆ ಬರುತ್ತಾರೆ. ನಂಬಿಕೆಯಿಲ್ಲದವರಿಗೂ ಸಹ ತಮ್ಮ ವೈಯಕ್ತಿಕ ಜೀವನದ ಮೇಲೆ ಮತ್ತು ತಮ್ಮ ಆಸ್ತಿಗಳ ಮೇಲೆ ನ್ಯಾಯಯುತವಾದ ಹಕ್ಕಿದೆ. ಅವರು ತಮ್ಮನ್ನು ತಾವು ಹತೋಟಿಯಲ್ಲಿಟ್ಟುಕೊಳ್ಳಲು ಅಸಮರ್ಥರಾದರೆ ಅಥವಾ ಪ್ರತಿಯೊಬ್ಬ ವಿವೇಕಯುತ ವ್ಯಕ್ತಿಯು ಮಾನ್ಯ ಮಾಡುವ ತತ್ತ್ವಗಳಿಗನುಗುಣವಾಗಿ ನಡೆದುಕೊಳ್ಳದಿದ್ದಾಗ ಮಾತ್ರ ಅವರ ಸ್ವತ್ತುಗಳನ್ನು ಹಾಗೂ ಹಕ್ಕುಗಳನ್ನು ರದ್ದುಗೊಳಿಸಬೇಕಾಗುತ್ತದೆ. ಈ ಸಿದ್ಧಾಂತವು ಪ್ರಕಟವಾದ ತಕ್ಷಣ ಸ್ಪಾನಿಷ್ ಜನರು ಮೂಲನಿವಾಸಿ ಅಮೆರಿಕನ್ನರ ರೂಢಿಗಳಾದ ನಗ್ನತೆ, ಶ್ರಮದ ಬಗೆಗಿನ ತಾತ್ಸಾರ ಮತ್ತು ನರಭಕ್ಷಣೆ ಇವುಗಳ ಕಾರಣದಿಂದ, ಸಹಜ ನ್ಯಾಯವನ್ನು ಗುರುತಿಸಲು ಅವರು ಅಸಮರ್ಥರೆಂಬುದು ಸ್ಪಷ್ಟವಾಗುತ್ತದೆಂಬ ಕ್ಷಿಪ್ರ ತಿರ್ಮಾನವನ್ನು ತೆಗೆದುಕೊಳ್ಳುತ್ತಾರೆ. ರೆಡ್ ಇಂಡಿಯನ್ನರ ಸ್ಥಳೀಯ ರೂಢಿ ಆಚರಣೆಗಳನ್ನು ನೆಪವಾಗಿ ಇಟ್ಟುಕೊಂಡು ಅವರ ಗುಲಾಮಗಿರಿಯನ್ನು ನ್ಯಾಯಸಮ್ಮತಗೊಳಿಸಲಾಯಿತು. ಅವರಿಗೆ ನಾಗರಿಕತೆಯನ್ನು ಕಲಿಸಿ ಕ್ರೈಸ್ತ ಧರ್ಮವನ್ನು ಸ್ವೀಕರಿಸುವಂತೆ ಮಾಡಲು ಇದೊಂದೇ ದಾರಿ ಎಂದು ಸ್ಪಾನಿಷ್ ವಸಾಹತುಶಾಹಿಗಳು ತೀರ್ಮಾನಿಸಿದರು.

ಅಮೆರಿಕಗಳಿಗೆ ಕಳುಹಿಸಲಾದ ಕೆಲವು ಸ್ಪಾನಿಷ್ ಮತ ಪ್ರಚಾರಕರು ರೆಡ್ ಇಂಡಿಯನ್ ಗುಲಾಮರ ಶೋಷಣೆ ವ್ಯಾಪಕವಾಗಿ ಹಾಗೂ ಬರ್ಬರವಾಗಿ ನಡೆಯುತ್ತಿರುವುದನ್ನು ಮತ್ತು ಅವರಿಗೆ ಧರ್ಮದ ತಿಳಿವನ್ನು ನೀಡುವ ಯಾವುದೇ ಗಂಭೀರವಾದ ಪ್ರಯತ್ನವೂ ನಡೆಯದಿರುವುದನ್ನು ಗುರುತಿಸಿದರು. ರೆಡ್ ಇಂಡಿಯನ್ನರು ಯುದ್ಧದ ಸಂದರ್ಭದಲ್ಲಿ

ಆಚರಿಸುವ ಬರ್ಬರತೆಯನ್ನು ನೆಪವಾಗಿಟ್ಟುಕೊಂಡು ರೆಡ್ ಇಂಡಿಯನ್ನರನ್ನು ಬರ್ಬರ ಜನರೆಂದು ಆರೋಪಿಸಿ ಅವರನ್ನು ಗುಲಾಮಗಿರಿಗೆ ತಳ್ಳುವ ಕಪಟತೆಯನ್ನು ಹಾಗೂ ಅವರನ್ನು ಗುಲಾಮಗಿರಿಗೆ ಒಳಪಡಿಸಿದ ಪರಿಣಾಮವಾಗಿ ಹಿಸ್ಪಾನಿಯೋಲದಲ್ಲಿನ ಸ್ಥಳೀಯರ ಜನಸಂಖ್ಯೆ ಸ್ಪಾನಿಷ್ ಆಳ್ವಿಕೆಯ ಎರಡು ದಶಕಗಳಲ್ಲಿ ಎರಡೂವರೆ ಲಕ್ಷದಿಂದ ೧೫೦೦೦ಕ್ಕೆ ಇಳಿಯಿತು ಎಂಬುದನ್ನು ಕೂಡ ಡಾಮಿನಿಕ್ ಪಂಥದವರು ಗಮನಿಸಿದರು. “ನಾಗರೀಕತೆ” ಯನ್ನು ಕಲಿಸುವ ನೆಪದಲ್ಲಿ ಸ್ಪಾನಿಷ್ ಜನರು ನಡೆಸಿದ ನರಮೇಧದ ಕಾರಣದಿಂದ ಅವರ ನಾಗರಿಕಗೊಳಿಸುವ ಧ್ಯೇಯವನ್ನೇ ಡಾಮಿನಿಕ್ ಪಂಥೀಯರು ಪ್ರಶ್ನಿಸಲು ಪ್ರಾರಂಭಿಸಿದರು. ಬಾರ್ಟೋಲೋಮ್ ಡಿ ಲಾಸ್ ಕಸಾಸ್ ಮತ್ತು ಫ್ರಾನ್ಸಿಸ್ಕಸ್ ಡಿ ವಿಕ್ಟೋರಿಯ - ಇವರಿಬ್ಬರು ಸ್ಪಾನಿಷ್ ವಸಾಹತುಶಾಹಿ ಕಾರ್ಯಾಚರಣೆಗಳನ್ನು ತೀವ್ರವಾಗಿ ಟೀಕಿಸಿದ ಪ್ರಭಾವೀ ಟೀಕಾಕಾರರಲ್ಲಿ ಪ್ರಮುಖರು. ಸ್ಪಾನಿಷ್ ಆಳ್ವಿಕೆಯ ಕಾರ್ಯಾಚರಣೆಗಳಿಗೆ ಥಾಮಸ್ ಅಕ್ವಿನಾಸ್ ಅವರ ವಾದವನ್ನು ಅನ್ವಯಿಸಿ ರೆಡ್ ಇಂಡಿಯನ್‌ರ ಹಕ್ಕುಗಳ ಬಗ್ಗೆ ವಿಕ್ಟೋರಿಯ ಅವರು ಸರಣಿ ಉಪನ್ಯಾಸಗಳನ್ನು ನೀಡಿದರು. ಎಲ್ಲಾ ಮಾನವ ಜೀವಿಗಳೂ ತರ್ಕಬದ್ಧವಾಗಿ ಹಾಗೂ ವೈಚಾರಿಕವಾಗಿ ಚಿಂತಿಸುವ ಸಾಮರ್ಥ್ಯವನ್ನು ಹೊಂದಿದ್ದಾರೆ. ಈ ಸಾಮರ್ಥ್ಯದಿಂದಾಗಿ ಎಲ್ಲರೂ ಸಹಜ ನ್ಯಾಯದಿಂದ ದೊರಕುವ ಹಕ್ಕುಗಳನ್ನು ಹೊಂದಿರುತ್ತಾರೆ. ಇದರ ಆಧಾರದ ಮೇಲೆ ಅವರು, ಪೋಪ್ ಅವರು ಸ್ಪೇನ್‌ಗೆ ಅಮೆರಿಕಗಳ ಒಡೆತನದ ಹಕ್ಕನ್ನು ನೀಡಿರುವುದು ನ್ಯಾಯಸಮ್ಮತವಲ್ಲ ಎಂಬ ತೀರ್ಮಾನಕ್ಕೆ ಬಂದ ಅವರು ನಾಲ್ಕನೆಯ ಪೋಪ್ ಇನೊಸೆಂಟ್ ಅವರ ತೀರ್ಮಾನವನ್ನು ವಿರೋಧಿಸಿ, ರೆಡ್ ಇಂಡಿಯನರು ವ್ಯಭಿಚಾರವನ್ನೋ ಹಾದರವನ್ನೋ ಮಾಡುವ ಮೂಲಕ ಸಹಜ ನ್ಯಾಯವನ್ನು ಉಲ್ಲಂಘಿಸುತ್ತಾರೆ ಎಂದು ತೀರ್ಮಾನಿಸಿ ಅವರಿಗೆ ಶಿಕ್ಷೆಯನ್ನು ನೀಡಲು ಸ್ಪೇನ್‌ನವರಾಗಲಿ, ಪೋಪ್ ಅವರಾಗಲಿ ರೆಡ್ ಇಂಡಿಯನ್ನರನ್ನು ಸ್ಪೇನ್‌ನ ಆಧಿಪತ್ಯಕ್ಕೆ ಒಳಪಡಿಸಲಾಗದು ಎಂದು ವಿಕ್ಟೋರಿಯಾ ಅವರು ವಾದಿಸಿದರು. ಕಳ್ಳರು ಹಾಗೂ ವ್ಯಭಿಚಾರಿಗಳು ಎಂಬ ಕಾರಣಕ್ಕೆ ಕ್ರೈಸ್ತರ ಮೇಲೆ ಯುದ್ಧ ಮಾಡುವುದಕ್ಕಾಗಲಿ, ಅವರ ಆಸ್ತಿಗಳನ್ನು ವಶಪಡಿಸಿಕೊಳ್ಳುವುದಕ್ಕಾಗಲಿ ಪೋಪ್ ಅವರಿಗೆ ಯಾವುದೇ ಹಕ್ಕಿಲ್ಲವೆಂದು ಅವರು ಹೇಳಿದರು. ಅಂತಹ ಹಕ್ಕು ಅವರಿಗೆ ಇದ್ದ ಪಕ್ಷದಲ್ಲಿ, ಐರೋಪ್ಯ ರಾಜರುಗಳ ಅಧೀನತೆಯಲ್ಲಿರುವ ಯಾವುದೇ ಪ್ರದೇಶವೂ ಸುರಕ್ಷಿತವಲ್ಲ. ಪೋಪ್ ಮತ್ತು ಅವರ ಆದೇಶಕ್ಕನುಗುಣವಾಗಿ ವರ್ತಿಸುವ ಯಾವನೇ ಕ್ರೈಸ್ತ ರಾಜನಾಗಲಿ ಕ್ರೈಸ್ತರಲ್ಲದವರ ವಿರುದ್ಧ ಕಾನೂನುಗಳನ್ನು ಜಾರಿಗೊಳಿಸುವ ಹಕ್ಕನ್ನು ಹೊಂದಿರುವುದಿಲ್ಲ. ಏಕೆಂದರೆ ಅವರು ಕ್ರೈಸ್ತ ಸಮುದಾಯದಿಂದ ಹೊರಗಿದ್ದಾರೆ. ಆದ್ದರಿಂದ ಅವರೆಲ್ಲ ಪೋಪರ ಅಧಿಕಾರ ವ್ಯಾಪ್ತಿಯಿಂದ ಹೊರಗಿನವರು ಎಂದು ವಿಕ್ಟೋರಿಯ ವಾದಿಸಿದರು. (ವಿಲಿಯಂಸ್ ೧೯೯೦)

ಸ್ಪಾನಿಷ್ ವಿಜಯಗಳ ಸಮರ್ಥನೆಯನ್ನು ಮೇಲಿನ ಕಟುವಾದ ಶಬ್ದಗಳಿಂದ ಟೀಕೆಮಾಡಿದರೂ, ಅಮೆರಿಕಗಳಲ್ಲಿ ವೈಚಾರಿಕತೆಯ ಆಧಾರದಮೇಲೆ ರೂಪಿಸಲಾದ ತತ್ವಗಳ ನೆಲೆಯಲ್ಲಿ ಹಾಗೂ ಸಾರ್ವತ್ರಿಕವಾಗಿ ಎಲ್ಲರೂ ಬದ್ಧರಾಗಿರಬೇಕಾದ ಸೂತ್ರಗಳ ಆಧಾರದಲ್ಲಿ ರೂಪಿಸಲಾದ ‘ರಾಷ್ಟಗಳನಿಯಮ’ ಗಳನ್ನು, ರೆಡ್ ಇಂಡಿಯನ್ ಸಮುದಾಯಗಳು ಉಲ್ಲಂಘಿಸಿದ ಸಂದರ್ಭದಲ್ಲಿ ಅವರ ಮೇಲೆ ಮಾಡುವ ಬಲಪ್ರಯೋಗವು ನ್ಯಾಯಯುತವೆಂದು ವಿಕ್ಟೋರಿಯಾ ತೀರ್ಮಾನಿಸುತ್ತಾರೆ. ಇಂಡಿಯನರ ತಥಾಕಥಿತ ಸಹಜನ್ಯಾಯದ ಉಲ್ಲಂಘನೆಯು ಅವರ ಮೇಲೆ ಆಕ್ರಮಣ ನಡೆಸಲು ಸ್ಪೇನ್‌ನವರಿಗೆ ಸಮರ್ಥನೆ ಒದಗಿಸುವುದಿಲ್ಲ; ಆದರೆ ಆ ಸಹಜ ನ್ಯಾಯದಿಂದಲೇ ಜನ್ಮತಳೆದಂತಹ “ರಾಷ್ಟ್ರಗಳ ನಿಯಮ” ವನ್ನು ಉಲ್ಲಂಘಿಸಿದ ಕಾರಣಕ್ಕೆ ಅವರ ಮೇಲೆ ಯುದ್ಧಮಾಡಿ ಗೆಲ್ಲಬಹುದು ಎಂಬ ವಿಕ್ಟೋರಿಯ ಅವರ ವಾದಸರಣಿ ವಿರೋಧಾಭಾಸದಿಂದ ಕೂಡಿದೆ ಎಂದು ಮೇಲುನೋಟಕ್ಕೆ ಎನಿಸಬಹುದು. ಇಡೀ ವಿಶ್ವದಲ್ಲಿ ಬಹುತೇಕ ಜನರ ಒಮ್ಮತವು ಇದರ ಪರವಾಗಿರುವುದರಿಂದ ಮತ್ತು

ಈ ತತ್ತ್ವಗಳು ಸರ್ವರ ಒಳಿತನ್ನೂ ಒಳಗೊಂಡಿರುವುದರಿಂದ ರಾಷ್ಟ್ರಗಳ ಈ ನಿಯಮಗಳಿಗೆ ಎಲ್ಲರೂ ಬದ್ಧರಾಗಿರಲೇಬೇಕು (೩೯೧) ಎಂಬ ವಾದವನ್ನು ಮಂಡಿಸಿ ವಿಕ್ಟೋರಿಯ ಅವರು ತಮ್ಮ ಮಾತುಗಳನ್ನು ಸಮರ್ಥಿಸಿಕೊಳ್ಳುತ್ತಾರೆ. ಸಹಜ ನ್ಯಾಯದ ಜೊತೆ ಸೇರಿಕೊಂಡಿರುವ ಇತರೇ ತತ್ವಗಳು (ಹಾದರ ಹಾಗೂ ಮೂರ್ತಿಪೂಜೆಯಂತಹವುಗಳ ನಿಷೇಧ), ಅವುಗಳನ್ನು ಒಪ್ಪಿ ಆಚರಿಸುವವರಿಗೆ ಮಾತ್ರ ಅನ್ವಯವಾಗುತ್ತವೆ. ಆದರೆ ರಾಷ್ಟ್ರಗಳ ನಿಯಮಗಳು (ಉದಾ: ಶಾಂತಿಯುತ ಪ್ರಯಾಣ ಹಾಗೂ ವ್ಯಾಪಾರದ ನಿಷೇಧ ಇತ್ಯಾದಿ) ಅವುಗಳನ್ನು ಒಪ್ಪದೇ ಇರುವವರಿಗೆ ಅನ್ವಯವಾಗುತ್ತವೆ ಎಂಬ ತಿಳಿವಳಿಕೆಯ ಮೇಲೆ ಅವರು ಈ ಭಿನ್ನತೆಯನ್ನು ಮಾಡಿರುವಂತೆ ಕಾಣುತ್ತದೆ. ಯುದ್ಧವು ಶಾಂತಿಯುತ ವ್ಯಾಪಾರ ಮತ್ತು ಧರ್ಮಪ್ರಚಾರ ಕಾರ್ಯಗಳನ್ನು ಮುನ್ನಡೆಸುವ ನ್ಯಾಯಯುತ ಗುರಿಗಳಿಗೆ ಸೀಮಿತವಾಗಿರಬೇಕೆಂಬುದನ್ನು ಅವರು ಒತ್ತಿ ಹೇಳಿದರೂ, ರಾಷ್ಟ್ರಗಳ ನಿಯಮದ ಬಗೆಗಿನ ಈ ತಿಳಿವಳಿಕೆ ಅಂತಿಮವಾಗಿ ಸ್ಪಾನಿಷ್ ವಸಾಹತುಶಾಹಿಯ ಸಂರಕ್ಷಣೆಯ ಕಡೆಗೆ ಅವರನ್ನು ಮುನ್ನಡೆಸಿತು ಮತ್ತು ವಸಾಹತುಶಾಹಿಯ ಪರವಾಗಿ ನಿಲ್ಲುವಂತೆ ಮಾಡಿತು. ಸ್ಪಾನಿಷ್ ವಸಾಹತುಶಾಹಿಯ ಕಾನೂನುಬದ್ಧತೆ ಮತ್ತು ನೈತಿಕತೆಯನ್ನು ಕುರಿತಾದ ಟೀಕೆಗಳಲ್ಲಿ "ಸ್ಪಾನಿಷ್ ವಿಜಯ" ವನ್ನು ಸೀಮಿತ ರೀತಿಯಲ್ಲಿ ನ್ಯಾಯಬದ್ಧಗೊಳಿಸುವ ವಿಕ್ಟೋರಿಯ ಅವರ ಪ್ರವೃತ್ತಿಯೂ ಕಂಡುಬರುತ್ತದೆ.

೩. ಉದಾರವಾದ ಮತ್ತು ಸಾಮ್ರಾಜ್ಯ:-

ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನಗಳಲ್ಲಿ ವಸಾಹತುಶಾಹಿಯ ನ್ಯಾಯಸಮ್ಮತೆಯು ಫ್ರೆಂಚ್, ಜರ್ಮನ್ ಹಾಗೂ ಬ್ರಿಟಿಷ್ ತತ್ವಶಾಸ್ತ್ರಜ್ಞರಲ್ಲಿ ಕೂಡಾ ಚರ್ಚೆಯ ವಿಷಯವಾಗಿತ್ತು. ಎನ್‌ಲೈಟನ್‌ಮೆಂಟ್ (ಜ್ಞಾನೋದಯ) ಪಂಥದ ಚಿಂತಕರಾದ ಕ್ಯಾಂಟ್, ಸ್ಮಿತ್ ಮತ್ತು ಡಿಡೆರೋ ವಸಾಹತುಶಾಹಿಯ ಬರ್ಬರತೆಯನ್ನು ಖಂಡಿಸುತ್ತಾ ಐರೋಪ್ಯರು ವಿಶ್ವದ ಉಳಿದ ಜನರನ್ನು ನಾಗರಿಕರನ್ನಾಗಿಸುವ ಬಾಧ್ಯತೆಯನ್ನು ಹೊಂದಿದ್ದಾರೆಂಬ ವಿಚಾರಕ್ಕೆ ಸವಾಲೆಸೆದರು. ಮೊದಲ ನೋಟದಲ್ಲಿ ಎನ್‌ಲೈಟನ್‌ಮೆಂಟ್ ಚಿಂತಕರು ವಸಾಹತುಶಾಹಿಯ ಒಂದು ವಿಮರ್ಶೆಯನ್ನು ಅಭಿವೃದ್ಧಿ ಪಡಿಸುತ್ತಾರೆಂಬುದು ನಿಚ್ಚಳವಾಗಿ ತೋರಿಬರುತ್ತದೆ. ವಸಾಹತುಶಾಹಿ ಪ್ರಭುತ್ವದ ವ್ಯವಸ್ಥೆಯು ಗುಲಾಮಗಿರಿ ಮತ್ತು ಅರೆ-ಉಳಿಗಮಾನ್ಯ ಪದ್ಧತಿಯಲ್ಲಿನ ಬಲಾತ್ಕಾರದ ಶ್ರಮ ಅಥವ ಆಸ್ತಿಗಳನ್ನು ಸ್ವಾಧೀನ ಪಡಿಸಿಕೊಳ್ಳುವುದು ಮುಂತಾದವನ್ನು ಒಳಕೊಂಡಿದೆ. ಇದು ಪ್ರತಿಯೊರ್ವ ವ್ಯಕ್ತಿಯು ವೈಚಾರಿಕವಾಗಿ ಚಿಂತಿಸಲು ಅರ್ಹನಾಗಿದ್ದು, ತನ್ನ ವ್ಯವಹಾರಗಳನ್ನು ತಾನೇ ನೋಡಿಕೊಳ್ಳಲು ಸಮರ್ಥನಾಗಿರುತ್ತಾನೆ ಎಂಬ ಎನ್‌ಲೈಟನ್‌ಮೆಂಟ್ ಚಿಂತನೆಯ ಮೂಲ ತತ್ವಗಳಿಗೆ ವಿರುದ್ಧವಾದುದು. ಅದೇನೇ ಇದ್ದರೂ ಆಗ ಉದಯಿಸಿದ ವಸಾಹತುಶಾಹಿ-ವಿರೋಧಿ ರಾಜಕೀಯ ಸಿದ್ಧಾಂತಕ್ಕೆ ಎಲ್ಲ ಜನರಲ್ಲಿ ಸಹಭಾಜಿತ ಮಾನವೀಯತೆಯನ್ನು ಗುರುತಿಸುವ ಸಾರ್ವತ್ರಿಕ ನೈತಿಕತೆಗಿಂತ ಉನ್ನತವಾದ ವಿಚಾರದ ಅಗತ್ಯವಿತ್ತು. ಮೇಲೆ ಸೂಚಿಸಿದಂತೆ, ವಸಾಹತುಶಾಯಿಯನ್ನು ಟೀಕಿಸುವ ಥಾಮಸ್ ಅಕ್ವಿನಾಸ್ ಅವರ ಸಾರ್ವಭೌಮಿಕವಾದವು(universalism) ಸಾಪೇಕ್ಷವಾಗಿ ದುರ್ಬಲವಾದ ಅಡಿಪಾಯವನ್ನು ಹೊಂದಿತ್ತು. ಸಹಜ ನ್ಯಾಯದ ಅಮೂರ್ತ ಸಾರ್ವಭೌತಿಕವಾದ ಮತ್ತು ಮೂಲ ನಿವಾಸಿಗಳ ಸಾಂಸ್ಕೃತಿಕ ಆಚರಣೆಗಳ ನಡುವೆ ಉಂಟಾಗುವ ತಿಕ್ಕಾಟಗಳಿಂದಾಗಿ, ಅವರ ಈ ಆಚರಣೆಗಳು ಸಹಜನ್ಯಾಯಕ್ಕೆ ವಿರುದ್ಧ ಎಂಬುದಕ್ಕೆ ಪುರಾವೆಗಳು ಎಂದು ಆರೋಪಿಸುವ ಪ್ರಕ್ರಿಯೆಯನ್ನು ಸುಲಭಗೊಳಿಸಿದವು. ಇದು ಶೋಷಣೆಗೆ ಒಂದು ರೀತಿಯಲ್ಲಿ ಸಮರ್ಥನೆಯಾಯಿತು.

ಫ್ರೆಂಚ್ ತತ್ವಶಾಸ್ತ್ರಜ್ಞ ಡಿಡೆರೋ ಐರೋಪ್ಯ ವಸಾಹತೀಕರಣದ ಅತ್ಯಂತ ಪ್ರಬಲವಾದ ಟೀಕಾಕಾರರಾಗಿದ್ದರು. ಅವರು ರೇನಾಲ್ ಅವರ ಊisಣoiಡe ಜes ಜeux Iಟಿಜesಗೆ ಬರೆದಿರುವ ಲೇಖನದಲ್ಲಿ ಐರೋಪ್ಯ ನಾಗರಿಕತೆಯಿಂದ ಸ್ಥಳೀಯ ಜನರಿಗೆ ಲಾಭವಾಗುತ್ತದೆ ಎಂಬ ನಿಲುವಿಗೆ ಸವಾಲೆಸೆದರು ಮತ್ತು ಯೂರೋಪಿಯನ್ ವಸಾಹತುಶಾಹಿಗಳೇ ಅನಾಗರಿಕರು ಎಂದು ವಾದಿಸಿದರು. ಅವರು ಹೇಳುವುದೆಂದರೆ ಸಂಸ್ಕೃತಿಯು ("ರಾಷ್ಟ್ರೀಯಚಾರಿತ್ರ್ಯ" ) ನೈತಿಕತೆಗೆ ಪ್ರಾಶಸ್ತ್ಯ ನೀಡುತ್ತದೆ ಮತ್ತು ಪರಸ್ಪರರಿಗೆ ಗೌರವವನ್ನು ನೀಡುವ ರೂಢಿಗಳಿಗೆ ಬಲವನ್ನು ತುಂಬುತ್ತದೆ.. ಆದರೆ ಒಬ್ಬ ವ್ಯಕ್ತಿಯು ತನ್ನ ತಾಯಿನಾಡಿನಿಂದ ದೂರವಾದಾಗ ಈ ರೂಢಿಗಳು ನಶಿಸಿ ಹೋಗುತ್ತವೆ. ಡಿಡೆರೋ ಅವರ ಪ್ರಕಾರ ವಸಾಹತುಶಾಹಿಗಳು ತಮ್ಮ ದೇಶದ ಕಾನೂನು ಸಂಸ್ಥೆಗಳಿಂದ ಹಾಗೂ ಅನೌಪಚಾರಿಕ ವಿಧಿನಿಷೇಧಗಳಿಂದ ದೂರವಿರುವುದರಿಂದ ಅತಿರೇಕ ಹಾಗೂ ದೌರ್ಜನ್ಯದ ತಾಣಗಳಾಗುತ್ತವೆ. ಇದು ಅವರಲ್ಲಿದ್ದ ಸಂಯಮವನ್ನು ದುರ್ಬಲಗೊಳಿಸುತ್ತದೆ ಮತ್ತು ಮನುಷ್ಯನ ಆಂತರ್ಯದಲ್ಲಿರುವ ಸಹಜ ಹಿಂಸಾತ್ಮಕ ಪ್ರವೃತ್ತಿಗಳನ್ನು ಪ್ರಚೋದಿಸುತ್ತದೆ (ಮುತ್ತು ೨೦೦೩).

ಡಿಡೆರೋ ಅವರು ಯೂರೋಪಿಯನ್ ವಸಾಹತುಶಾಹಿಯ ಮುಖ್ಯ ಸಮರ್ಥನೆಗಳಿಗೂ ಸವಾಲು ಹಾಕುತ್ತಾರೆ. ವಸತಿಗಳಿಲ್ಲದ ಪ್ರದೇಶಗಳ ವಸಾಹತೀಕರಣವನ್ನು ಅವರು ಒಪ್ಪಿದರೂ, ವಿದೇಶಿ ವ್ಯಾಪಾರಿಗಳು ಮತ್ತು ಅನ್ವೇಷಕರು ಜನರು ವಾಸಿಸುವ ಪ್ರದೇಶಗಳನ್ನು ಪ್ರವೇಶಿಸುವ ಹಕ್ಕನ್ನು ಹೊಂದಿರುವುದಿಲ್ಲವೆಂಬುದನ್ನು ಒತ್ತಿ ಹೇಳುತ್ತಾರೆ. ಇದು ಅತ್ಯಂತ ಮಹತ್ತರ ವಿಷಯವಾಗುತ್ತದೆ. ಏಕೆಂದರೆ ಹದಿನಾರು ಮತ್ತು ಹದಿನೇಳನೆಯ ಶತಮಾನದ ಸ್ಪಾನಿಷ್ ಚಿಂತಕರು ವ್ಯಾಪಾರದ ಹಕ್ಕನ್ನು ಅನ್ವೇಷಣೆ ಮತ್ತು ಧರ್ಮಪ್ರಚಾರ ಕಾರ್ಯಗಳನ್ನು ಒಳಕೊಂಡಿದ್ದ ವಸಾಹತೀಕರಣದ ಸಮರ್ಥನೆಗಾಗಿ ಬಳಸುತ್ತಿದ್ದರು. ಸ್ಥಳೀಯ ನಿವಾಸಿಗಳು "ರಾಷ್ಟ್ರಗಳ ನಿಯಮ" ವನ್ನು ಉಲ್ಲಂಘಿಸಿರದ ಶಾಂತಿಪ್ರಿಯ ವ್ಯಾಪಾರಿಗಳನ್ನು ಹಾಗೂ ಮತಪ್ರಚಾರಕರನ್ನು ಹೊರಗಿಡುವಂತಿಲ್ಲ ಎಂಬ ಧೋರಣೆ ವಿಕ್ಟೋರಿಯಾರವರ ತೀರ್ಮಾನವಾಗಿತ್ತು. ಸ್ಥಳೀಯ ಜನರು ಈ ಆಕ್ರಮಣಗಳನ್ನು ಪ್ರತಿರೋಧಿಸಿದ ಪಕ್ಷದಲ್ಲಿ ಸ್ಪಾನಿಷ್ ಜನರು ಯುದ್ಧ ಘೋಷಿಸಿ ಅವರ ಪ್ರದೇಶಗಳನ್ನು ವಶಪಡಿಸಿಕೊಳ್ಳುವುದು ನ್ಯಾಯಸಮ್ಮತವಾಗಿತ್ತು. ಐರೋಪ್ಯ ವ್ಯಾಪಾರಿಗಳು ತಮ್ಮನ್ನು ತಾವು 'ಅಪಾಯಕಾರಿ ಅತಿಥಿ' ಗಳೆಂದು ಸಾಬೀತು ಪಡಿಸಿರುವುದರಿಂದ, ಡಿಡೆರೋ ಈ ನಿಲುವನ್ನು ವಿಶೇಷವಾಗಿ ಪ್ರಶ್ನಿಸುತ್ತಾರೆ (ಮುತ್ತು ೨೦೦೩:೭೫).

ಎನ್‌ಲೈಟನ್‌ಮೆಂಟ್ ಚಿಂತಕರು ವಸಾಹತುಶಾಹಿಯ ಮೇಲಿನ ಸ್ಪಷ್ಟವಾದ ವಿಮರ್ಶೆಯನ್ನು ರೂಪಿಸುವ ಮೊದಲೆ ಸಂಸ್ಕೃತಿ ಮತ್ತು ಸಾಂಸ್ಕೃತಿಕ ಬಹುಳತ್ವದ ಮಹತ್ವವನ್ನು ಅವರು ಗುರುತಿಸಬೇಕಾಯಿತು. ಎಲ್ಲ ವ್ಯಕ್ತಿಗಳೂ ಘನತೆ ಮತ್ತು ಗೌರವಕ್ಕೆ ಸಮಾನವಾಗಿ ಪಾತ್ರರು ಎಂಬ ವಿಚಾರ ಆವಶ್ಯಕವಾಗಿದ್ದರೂ ಸಾಮ್ರಾಜ್ಯಶಾಹಿ-ವಿರೋಧಿ ಚಿಂತನೆಗೆ ಅದು ಸಾಕಷ್ಟು ಬಲವಾದ ಆಧಾರವಾಗಿರಲಿಲ್ಲ. ವಿವಿಧ ರೀತಿಯ ಸಂಸ್ಥೆಗಳನ್ನು ಅಭಿವೃದ್ಧಿಪಡಿಸುವ, ನಿರೂಪಣೆಗಳನ್ನು ರೂಪಿಸುವ ಮತ್ತು ಸೌಂದರ್ಯ ಪ್ರಜ್ಞೆಯನ್ನು ಬೆಳೆಸುವ ಪ್ರವೃತ್ತಿಗಳು ಮಾನವ ಸಾಮರ್ಥ್ಯಕ್ಕೆ ಅಗತ್ಯವಾದುದು ಎಂಬುದನ್ನು ಕೂಡ ಅವರು ಗುರುತಿಸಬೇಕಾಗಿತ್ತು. ಮಾನವರ ಮಾನವೀಯ ಗುಣಗಳು, ಅವರ ಅಸ್ತಿತ್ವದ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸುತ್ತವೆ ಎಂಬುದು ಅವರವರ ವಿಶಿಷ್ಟ ಆಚರಣೆಗಳಲ್ಲಿ ಅಭಿವ್ಯಕ್ತವಾಗುತ್ತದೆ ಎಂಬುದನ್ನು ಮೋಯರ್ಸ್ ಎಂಬ ಫ್ರೇಂಚ್ ಉಕ್ತಿ, ಅಥವಾ ನಾವಿಂದು ಬಳಸುವ ಸಂಸ್ಕೃತಿ ಎಂಬ ಉಕ್ತಿ ಚೆನ್ನಾಗಿ ಗ್ರಹಿಸುತ್ತದೆ.

ಡಿಡೆರೊ, ಕ್ಯಾಂಟ್ ಮುಂತಾದವರ ಸಾಮ್ರಾಜಶಾಹಿ ವಿರೋಧಿ ಜ್ಞಾನೋದಯ (ಎನ್‌ಲೈಟನ್‌ಮೆಂಟ್) ಕಾರ್ಯಗಳು ಸಾರ್ವತ್ರಿಕ ಪರಿಕಲ್ಪನೆಗಳಾದ ಮಾನವ ಹಕ್ಕುಗಳು ಮತ್ತು ಸಾಂಸ್ಕೃತಿಕ ಬಹುಳತ್ವದ ವಾಸ್ತವಿಕತೆಗಳ ನಡುವಣ ಘರ್ಷಣೆಯ ವಿರುದ್ಧದ ಹೋರಾಟವನ್ನು ಪ್ರತಿಬಿಂಬಿಸುತ್ತವೆ. ಮಾನವ ಘನತೆಯೆಂಬುದು ವಿವೇಚನೆಯ ನಿಟ್ಟಿನ ಸಾರ್ವತ್ರಿಕ ಮಾನವ ಸಾಮರ್ಥ್ಯವೆಂದು ಅರ್ಥಮಾಡಿಕೊಳ್ಳಬೇಕು ಎಂಬುದು ಸಾಮ್ರಾಜ್ಯಶಾಹಿ-ವಿರೋಧಿ ಜ್ಞಾನೋದಯದಲ್ಲಿರುವ ವಿರೋಧಾಭಾಸವಾಗಿದೆ. ಐರೋಪ್ಯ ವೀಕ್ಷಕನೊಬ್ಬನಿಗೆ ಪರಿಚಯವಿಲ್ಲದ ಸಾಂಸ್ಕೃತಿಕ ಆಚರಣೆಗಳಲ್ಲಿ ಇತರರು ತಮ್ಮನ್ನು ತೊಡಗಿಸಿಕೊಂಡಿರುವುದನ್ನು ನೋಡಿದಾಗ ಅಥವಾ ಅದರಿಂದ ಅವನ ಮನಸ್ಸಿಗೆ ಹಿಂಸೆಯಾದಾಗ ಅವನಿಗೆ ಅದು ಅರ್ಥಹೀನ, ಗೌರವಕ್ಕೆ ಅನರ್ಹ ಮತ್ತು ವಿಚಾರಶೂನ್ಯವೆಂಬಂತೆ ಕಾಣಿಸುತ್ತದೆ. ಮಾನವನ ವೈಶಿಷ್ಟ್ಯಗಳನ್ನು ಮಾನವನ ಸಾರ್ವತ್ರಿಕ ಗುಣಗಳೆಂದು ಗುರುತಿಸಬೇಕೆಂಬುದು ಡಿಡೆರೋ ಇದಕ್ಕೆ ಸೂಚಿಸುವ ಪರಿಹಾರ. ಬೇರೆ ರೀತಿಯಲ್ಲಿ ಹೇಳುವುದಾದರೆ ಎಲ್ಲಾ ಮಾನವರೂ ಜೀವನದಲ್ಲಿ ಏಳಿಗೆ ಹೊಂದಲು ವಿವಿಧ ದಾರಿಗಳನ್ನು ಅನುಸರಿಸುತ್ತಾರೆ. ಅದರ ಆವಶ್ಯಕತೆಗನುಗುಣವಾಗಿ ಕಾರ್ಯಗತಗೊಳಿಸ-ಬಹುದಾದ, ಆದರೆ ಕಠೋರವಾದ ಅನ್ಯಾಯಗಳನ್ನು ಅಥವಾ ಕ್ರೌರ್ಯವನ್ನು ತಾವೇ ಸೃಷ್ಟಿಸದೆ, ಕಟ್ಟುಪಾಡುಗಳನ್ನು ರೂಪಿಸಲು ಸಮಾನರೂಪದ ಬಯಕೆಗಳನ್ನು ಹೊಂದಿರುತ್ತಾರೆ. (ಮುತ್ತು ೨೦೦೩:೭೭). ಮಾನವನ ಆಸ್ತಿತ್ವಕ್ಕೆ ಎದುರಾಗುವ ಸವಾಲುಗಳಿಗೆ ಅಸಂಖ್ಯಾತ ರೀತಿಯಲ್ಲಿ ಪರಿಹಾರಗಳಿರುತ್ತವೆ. ಎಲ್ಲಾ ಸಮಾಜಗಳು ವೈಯಕ್ತಿಕ ಅಹಂಭಾವ ಮತ್ತು ಸಾಮಾಜಿಕತೆಯನ್ನು ಸಮತೋಲನದಲ್ಲಿಟ್ಟುಕೊಳ್ಳುವ ದಾರಿಯನ್ನು ಕಂಡುಕೊಳ್ಳಬೇಕು ಮತ್ತು ಭೌತಿಕ ಪರಿಸರದಿಂದ ಎದುರಾಗುವ ತೊಂದರೆಗಳನ್ನು ನಿವಾರಿಸಿಕೊಳ್ಳಬೇಕು. ಈ ಹಿನ್ನೆಲೆಯಲ್ಲಿ ನೋಡಿದಾಗ ವೈಚಾರಿಕತೆಗಿಂತ ಸಂಸ್ಕೃತಿಯು ಸಾರ್ವತ್ರಿಕ ಮಾನವ ಸಾಮರ್ಥ್ಯವಾಗಿರುತ್ತದೆ ಎಂಬುದು ಕಾಣುತ್ತದೆ.

ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನಗಳ ಇತರ ಹಲವು ರಾಜಕೀಯ ತತ್ತ್ವಶಾಸ್ತ್ರಜ್ಞರಂತೆ ಡಿಡೆರೋ ಅವರು ಪಶ್ಚಿಮೇತರ ಸಮಾಜಗಳೆಲ್ಲವೂ ಆವಶ್ಯಕವಾಗಿ ಹಿಂದುಳಿದ ಸಮಾಜಗಳೆಂದು (ಉದಾ:- ರಾಜಕೀಯ ಮತ್ತು ಸಾಮಾಜಿಕ ಸಂಘಟನೆಗಳಿಲ್ಲದಿರುವುದು) ಪರಿಭಾವಿಸಿರಲಿಲ್ಲ, ಅಥವಾ ಹೆಚ್ಚು ಸಂಕೀರ್ಣ ಸ್ವರೂಪದ ಸಾಮಾಜಿಕ ವ್ಯವಸ್ಥೆಗಳಿರುವ ಸಮಾಜಗಳನ್ನು ಮೇಲ್ಮಟ್ಟದ್ದೆಂದು ಸಹ ಅವರು ಪರಿಗಣಿಸಿರಲಿಲ್ಲ. ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿಯ ಪ್ರತಿಪಾದಕರಿಂದ ಅವರ ಟೀಕಾಕಾರರನ್ನು ಬೇರ್ಪಡಿಸುವಂತಹ ಮುಖ್ಯ ವ್ಯತ್ಯಾಸವೆಂದರೆ ಸಂಸ್ಕೃತಿ, ಇತಿಹಾಸ ಮತ್ತು ಪ್ರಗತಿಯ ನಡುವಣ ಸಂಬಂಧದ ಬಗ್ಗೆ ಅವರಿಗಿರುವ ನಿಲವು. ಫ್ರಾನ್ಸ್ ಮತ್ತು ಇಂಗ್ಲೆಂಡ್‌ನಲ್ಲಿ ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನಗಳ ಅನೇಕ ಪ್ರಭಾವಶಾಲಿ ತತ್ತ್ವಶಾಸ್ತ್ರಜ್ಞರು ಸ್ಕಾಟಿಷ್ ಎನ್‌ಲೈಟನ್‌ಮೆಂಟಿನೊಂದಿಗೆ ಸಂಬಂಧ ಹೊಂದಿದ, ಚರಿತ್ರೆಯನ್ನು ಅಭಿವೃದ್ಧಿಪರವಾಗಿ ನೋಡುವ ಮಾರ್ಗದ ಕೆಲವಂಶಗಳನ್ನು ತಮ್ಮದಾಗಿಸಿಕೊಂಡಿದ್ದರು.. ಐತಿಹಾಸಿಕ ಬೆಳವಣಿಗೆಯ ಸ್ಟೇಡಿಯಲ್ ಸಿದ್ಧಾಂತದ (ಹಿಮಯುಗದಿಂದ ಮುಂದಕ್ಕೆ ನಡೆದ ವಿಕಾಸದ ಸಿದ್ಧಾಂತದ) ಪ್ರಕಾರ ಎಲ್ಲ ಸಮಾಜಗಳು ಸ್ವಾಭಾವಿಕವಾಗಿ ಬೇಟೆಯಾಡುವುದು, ಪ್ರಾಣಿಗಳ ಸಾಕಾಣಿಕೆ, ವ್ಯವಸಾಯ, ಮತ್ತು ವಾಣಿಜ್ಯ ಮುಂತಾದ ಬೆಳವಣಿಗೆಯ ವಿವಿಧ ಹಂತಗಳ ಮೂಲಕ ಅಭಿವೃದ್ಧಿಯನ್ನು ಕಂಡವು. ಅನಾಗರಿಕ ಸಮಾಜದ ಹಂತದಿಂದ ನಾಗರಿಕತೆಯ ಮಟ್ಟವನ್ನು ಮುಟ್ಟಿ ಒಂದು ಸಾಂಸ್ಕೃತಿಕ ವೃತ್ತಖಂಡವನ್ನು ಮೂಡಿಸಿತು. ನಾಗರಿಕತೆಯೆಂಬುದು ಭೌತಿಕ ಅಭಿವೃದ್ಧಿಯ ಸಂಕೇತವಷ್ಟೆ ಅಲ್ಲದೆ ಸಮಾಜದ ನೈತಿಕ ಪ್ರಗತಿಯನ್ನು ಅಳೆಯುವ ಅಳತೆಗೋಲೂ ಆಗಿದೆ. (ಕೊಹ್‌ನ್ ಮತ್ತು ಒನೀಲ್ ೨೦೦೬).

ನಾಗರಿಕತೆ, ಅನಾಗರಿಕತೆ ಮತ್ತು ಬರ್ಬರತೆಯ ಭಾಷೆಯು ವಿಭಿನ್ನ ರೀತಿಯ ಲೇಖಕರಾದ ಎಡ್ಮಂಡ್‌ಬರ್ಕ್, ಕಾರ್ಲ್ ಮಾರ್ಕ್ಸ್ ಮತ್ತು ಜಾನ್ ಸ್ಟೂವರ್ಟ್ ಮಿಲ್ ಇವರ ಬರಹಗಳಲ್ಲೆಲ್ಲ ವ್ಯಾಪಿಸಿದೆ. ಆದ್ದರಿಂದ ಇತಿಹಾಸದ ಬೆಳವಣಿಗೆಯ ಸಿದ್ಧಾಂತವು ಉದಾರ ಸಂಪ್ರದಾಯದಿಂದ ವಿಭಿನ್ನವಾಗಿದೆಯೆಂಬ ತೀರ್ಮಾನಕ್ಕೆ ಬರುವುದು ತಪ್ಪಾಗುತ್ತದೆ. ಹಾಗಿದ್ದರೂ, ಸ್ಕಾಟಿಷ್ ಜ್ಞಾನೋದಯ ಪಂಥದ ಫರ್ಗುಸನ್ ಮತ್ತು ಸ್ಮಿತ್ ಅವರು ಇದರ ಪ್ರಮುಖ ಪ್ರತಿಪಾದಕರಾಗಿದ್ದು, ಆ ಪಂಥವು ಉದಾರವಾದದೊಂದಿಗೆ ಅತ್ಯಂತ ನಿಕಟ ಸಂಬಂಧವನ್ನು ಹೊಂದಿದೆ. ಸ್ಮಿತ್ ಅವರೇ ಸ್ವತ: ಸಾಮ್ರಾಜ್ಯಶಾಹಿಯನ್ನು ಆರ್ಥಿಕ ಕಾರಣಗಳಿಗಾಗಿ ವಿರೋಧಿಸಿದ್ದಾರೆ. ವಸಾಹತುಶಾಹಿ ವ್ಯವಸ್ಥೆಯಲ್ಲಿ ದೊಡ್ಡ ನಗರಗಳು ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳ ನಡುವೆ ಇರುವ ಅವಲಂಬನೆಯು ಸ್ವಯಂ ನಿಯಂತ್ರಿತ ಮಾರುಕಟ್ಟೆ ಪ್ರಕ್ರಿಯೆಗಳನ್ನು ಪಲ್ಲಟಗೊಳಿಸುತ್ತದೆಂದು ಅವರು ಭಾವಿಸಿದರು, ಮತ್ತು ಮಿಲಿಟರಿಯ ಆಧಿಪತ್ಯದ ವೆಚ್ಚವು ಹೆಚ್ಚಾಗಿ ಅದು ತೆರಿಗೆದಾರರ ಮೇಲೆ ಹೊರೆಯಾಗುತ್ತದೆಂಬ ಆತಂಕ ಸ್ಮಿತ್‌ರನ್ನು ಕಾಡುತ್ತಿತ್ತು (ಪಿಟ್ಸ್ ೨೦೦೫). ಐತಿಹಾಸಿಕ ಬೆಳವಣಿಗೆಯ ಪ್ರಕ್ರಿಯೆಯು ನಾಗರಿಕತೆಯನ್ನು ತನ್ನ ಅಂತಿಮ ಗುರಿಯನ್ನಾಗಿಟ್ಟುಕೊಂಡಿದೆಯೆಂಬ ವಿಚಾರ ಸಾಮ್ರಾಜ್ಯಶಾಹಿ-ಯನ್ನು ಸಮರ್ಥಿಸಲು ನೆರವಾಯಿತು. ಉದಯ್ ಮೆಹ್ತಾ ಅವರ ಪ್ರಕಾರ ಉದಾರವಾದಿ ಸಾಮ್ರಾಜ್ಯಶಾಹಿಯು ಸಾರ್ವತ್ರಿಕವಾದ ಮತ್ತು ಅಭಿವೃದ್ಧಿಪರ ಇತಿಹಾಸದ ನಡುವಣ ಕೊಡು-ಕೊಳ್ಳುವಿಕೆಯ ಪರಿಣಾಮವಾಗಿ ಬಂದ ಉತ್ಪನ್ನವಾಗಿದೆ (೧೯೯೯). ಎಲ್ಲಾ ವ್ಯಕ್ತಿಗಳು ವಿವೇಕಯುತವಾಗಿ ಚಿಂತಿಸಲು ಸಮರ್ಥರಿರುವುದರಿಂದ ತಾವೇ ತಮ್ಮ ವ್ಯವಹಾರಗಳನ್ನು ನಿರ್ವಹಿಸಿಕೊಳ್ಳಬಲ್ಲರು ಎಂಬುದು ಉದಾರವಾದದ ಮೂಲ ತತ್ತ್ವವಾಗಿದೆ. ಆದರೆ ವ್ಯಕ್ತಿಯ ಇಂತಹ ಸಾಮರ್ಥ್ಯಗಳು ನಾಗರಿಕತೆಯ ನಿರ್ದಿಷ್ಟ ಘಟ್ಟಗಳಲ್ಲಿ ಮಾತ್ರವೇ ರೂಪುಗೊಳ್ಳುತ್ತವೆ ಎಂದು ಈ ಸಾರ್ವತ್ರಿಕವಾದವನ್ನು ಅಭಿವೃದ್ಧಿಪರ ಇತಿಹಾಸದ ತತ್ತ್ವವು ಮಾರ್ಪಡಿಸುತ್ತದೆ. ಉದಾಹರಣೆಗೆ ಹೇಳುವುದಾದರೆ, ಜಾನ್ ಸ್ಟೂವರ್ಟ್ ಮಿಲ್‌ರವರ ಪ್ರಕಾರ (ಇಲ್ಲಿಂದಾಚೆಗೆ ಬರಿ ಮಿಲ್ ಎಂದು ಮಾತ್ರ ಹೇಳಲಾಗುವುದು) ಅನಾಗರಿಕರಿಗೆ ಸ್ವಾತಂತ್ರ್ಯದ ಬಗೆಗೆ ಅತಿರೇಕವೆನಿಸುವಷ್ಟು ಪ್ರೇಮವಿರುವುದರಿಂದ ತಮ್ಮನ್ನು ತಾವು ಆಳಿಕೊಳ್ಳುವ ಸಾಮರ್ಥ್ಯವಿರುವುದಿಲ್ಲ. ಬರ್ಬರ ಸಮಾಜಗಳಲ್ಲಿನ ಜೀತದಾಳುಗಳು, ಗುಲಾಮರು ಮತ್ತು ರೈತರಿಗೆ ವಿಧೇಯತೆಯ ಶಿಕ್ಷಣವನ್ನು ಎಷ್ಟರ ಮಟ್ಟಿಗೆ ನೀಡಲಾಗುತ್ತಿತ್ತೆಂದರೆ ಅವರ ವೈಚಾರಿಕ ಸಾಮರ್ಥ್ಯವನ್ನು ಸಂಪೂರ್ಣವಾಗಿ ನಾಶಮಾಡಲಾಗಿದೆ. ವ್ಯಕ್ತಿಗಳು ತಮಗೆ ಸ್ವಾತಂತ್ರ್ಯ ಮತ್ತು ಸ್ವಯಂ ಸರ್ಕಾರವನ್ನು ರಚಿಸುವ ಸಾಮರ್ಥ್ಯವಿದೆಯೆಂದು ಅರಿತುಕೊಳ್ಳುವ ಭೌತಿಕ ಮತ್ತು ಸಾಂಸ್ಕೃತಿಕ ಪರಿಸರಗಳನ್ನು ವಾಣಿಜ್ಯ ಸಮಾಜಗಳು ಮಾತ್ರ ನಿರ್ಮಾಣ ಮಾಡುತ್ತವೆ. ಈ ತರ್ಕಕ್ಕನುಗುಣವಾಗಿಯೇ ಗ್ರೇಟ್ ಬ್ರಿಟನ್‌ನಂತಹ ನಾಗರಿಕ ಸಮಾಜಗಳು ಕಡಿಮೆ ಅಭಿವೃದ್ಧಿ ಹೊಂದಿದ ಜನರ ಹಿತಾಸಕ್ತಿಗಳ ರಕ್ಷಣೆಗಾಗಿ ಅವರನ್ನು ಆಳುತ್ತಿವೆ. ಈ ದೃಷ್ಟಿಕೋನದಿಂದ ನೋಡಿದರೆ, ಸಾಮ್ರಾಜ್ಯಶಾಹಿಯು ಪ್ರಾಥಮಿಕವಾಗಿ ರಾಜಕೀಯ ಪ್ರಭುತ್ವದಂತೆ ಹಾಗೂ ಆರ್ಥಿಕ ಶೋಷಣೆಯಂತೆ ಇರುವುದಿಲ್ಲ. ಬದಲಿಗೆ, ಅದು ನಾಗರಿಕತೆಯನ್ನು ರಫ್ತು ಮಾಡಿ ಅವರನ್ನು ಸಲಹುತ್ತಿರುವಂತೆ (ಉದಾ:- ಆಧುನಿಕರಣ), ಸ್ಥಳೀಯ ಜನರ ಅಭಿವೃದ್ಧಿಗಾಗಿ ಇರುವ ವ್ಯವಸ್ಥೆಯಂತೆ ಕಾಣುತ್ತದೆ. ನಿರಂಕುಶಾಧಿಕಾರದ ಸರ್ಕಾರವು (ಮಿಲ್‌ರವರು ಈ ಪದವನ್ನು ಬಳಸಲು ಹಿಂಜರಿಯುವುದಿಲ್ಲ) ಅಂತಿಮವಾಗಿ ಬೆಳವಣಿಗೆಯನ್ನೂ ಸ್ವಯಮಧಿಕಾರವನ್ನೂ ಕೊನೆಗಾಣಿಸುವ ಸಾಧನವಾಗಿರುತ್ತದೆ.

ಬ್ರಿಟಿಷ್ ಈಸ್ಟ್ ಇಂಡಿಯ ಕಂಪನಿಯಲ್ಲಿ ಜೀವನ ಪರ್ಯಂತ ಉದ್ಯೋಗಿಯಾಗಿದ್ದ ಮಿಲ್, ವಿದೇಶಿ ಜನರ ನಿರಂಕುಶ ಸರ್ಕಾರವು ಅನ್ಯಾಯ ಮತ್ತು ಆರ್ಥಿಕ ಶೋಷಣೆಗೆ ಎಡೆ ಮಾಡಿಕೊಡುತ್ತದೆಂಬುದನ್ನು ಗುರುತಿಸಿದ್ದರು. ಈ ದುರ್ಬಳಕೆಗಳನ್ನು ತಡೆಯದಿದ್ದರೆ ಅದು ಸಾಮ್ರಾಜ್ಯಶಾಹಿ ಕಾರ್ಯಾಚರಣೆಗಳ ನ್ಯಾಯಬದ್ಧತೆ ಮತ್ತು

ಪರಿಣಾಮಕಾರಿತ್ವವನ್ನು ದುರ್ಬಲಗೊಳಿಸುತ್ತದೆ. ವಿದೇಶಿ (ಉದಾ: ಐರೋಪ್ಯರು) ಜನರೇಕೆ ವಸಾಹತುಗಳ ಆಳ್ವಿಕೆ ನಡೆಸಲು ಅರ್ಹರಲ್ಲ ಎಂಬುದಕ್ಕೆ ಮಿಲ್‌ರವರು ತಮ್ಮ 'ಪ್ರಾತಿನಿಧಿಕ ಸರಕಾರದ ಕುರಿತ ಪರಿಗಣನೆಗಳು' (ಕನ್ಸಿಡರೇಶನ್ಸ್ ಆನ್ ರೆಪ್ರಸೆಂಟಟಿವ್ ಗೌರ್ನಮೆಂಟ್" ಎಂಬ ಲೇಖನದಲ್ಲಿ (೧೮೬೧) ನಾಲ್ಕು ಕಾರಣಗಳನ್ನು ಗುರುತಿಸುತ್ತಾರೆ. ಮೊದಲನೆಯದಾಗಿ, ವಿದೇಶಿ ರಾಜಕಾರಣಿಗಳಿಗೆ ಬಹುತೇಕವಾಗಿ ಸಾರ್ವಜನಿಕ ನೀತಿಯನ್ನು ಪರಿಣಾಮಕಾರಿಯಾಗಿ ಜಾರಿಮಾಡುವ ಸಂದರ್ಭದಲ್ಲಿ ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸಲು ಅಗತ್ಯವಾದ ಸ್ಥಳೀಯ ಪರಿಸ್ಥಿತಿಗಳ ಬಗೆಗೆ ಜ್ಞಾನ ಇರುವ ಸಾಧ್ಯತೆ ಕಡಿಮೆ. ಎರಡನೆಯದಾಗಿ, ವಸಾಹತುಗಳ ಪ್ರಜೆಗಳ ವಸಾಹತುದಾರರ ಭಾಷೆ, ಧರ್ಮ ಹಾಗೂ ಸಂಸ್ಕೃತಿಗಳಲ್ಲಿರುವ ಭಿನ್ನತೆಯಿಂದ ವಸಾಹತು ದೊರೆಗಳು ಸ್ಥಳೀಯ ಜನರ ಬಗ್ಗೆ ಸಹಾನುಭೂತಿ ತೋರಿಸುವುದಕ್ಕೆ ಬದಲಿಗೆ ಅವರು ಆ ಜನರ ಮೇಲೆ ದಬ್ಬಾಳಿಕೆಯನ್ನು ನಡೆಸುವ ಸಾಧ್ಯತೆಯೇ ಹೆಚ್ಚಾಗಿರುತ್ತದೆ. ಮೂರನೆಯದಾಗಿ, ವಸಾಹತು ದೊರೆಗಳು ಸ್ಥಳೀಯ ಜನರನ್ನು ವಾಸ್ತವದಲ್ಲಿ ನ್ಯಾಯಸಮ್ಮತವಾಗಿ ನಡೆಸಿಕೊಳ್ಳಲು ಪ್ರಯತ್ನಿಸಿದರೂ, ತಮ್ಮಂತೆಯೇ ಇರುವ ಜನರ (ಉದಾ: ಬೇರೆ ವಸಾಹತು ದೊರೆಗಳು ಅಥವಾ ವ್ಯಾಪಾರಿಗಳ) ಬಗೆಗೆ ಅವರಿಗೆ ಸ್ವಾಭಾವಿಕವಾದ ಸಹಾನುಭೂತಿಯಿರುವುದರಿಂದ ಸಂಘರ್ಷದ ಸಮಯದಲ್ಲಿ ಅವರ ನ್ಯಾಯಪ್ರಜ್ಞೆ ಪಲ್ಲಟಗೊಳ್ಳುವ ಸಂಭವವಿರುತ್ತದೆ. ಕಡೆಯದಾಗಿ, ಮಿಲ್ ಅವರ ಪ್ರಕಾರ ವಸಾಹತು ರಾಜ್ಯಗಳ ಜನ ಮತ್ತು ವರ್ತಕರು ಕಡಿಮೆ ಶ್ರಮದಿಂದ ಹೆಚ್ಚಿನ ಸಂಪತ್ತನ್ನು ಗಳಿಸುವ ಉದ್ದೇಶದಿಂದ ಹೊರದೇಶಗಳಿಗೆ ಹೋಗುತ್ತಾರೆ. ಇದರ ಅರ್ಥವೆಂದರೆ ಅವರ ಆರ್ಥಿಕ ಚಟುವಟಿಕೆಗಳು ವಸಾಹತು ಆಳ್ವಿಕೆಗೊಳಪಟ್ಟ ದೇಶವನ್ನು ಅಭಿವೃದ್ಧಿಪಡಿಸುವ ಬದಲು ಅದನ್ನು ಶೋಷಿಸುವ ಗುರಿಯನ್ನು ಹೊಂದಿರುತ್ತವೆ. ಈ ವಾದಗಳು ಎಡ್ಮಂಡ್ ಬರ್ಕ್‌ರವರ ಬೃಹತ್ ಸಂಪುಟಗಳ ಲೇಖನಗಳಲ್ಲಿ ಪ್ರತಿಧ್ವನಿಸುತ್ತದೆ. ಅವರು ಭಾರತದಲ್ಲಿನ ಬ್ರಿಟಿಷ್ ದುರಾಡಳಿತದ ಬಗ್ಗೆ ಈ ಸಂಪುಟಗಳಲ್ಲಿ ವಿವರವಾಗಿ ಹೇಳಿದ್ದಾರೆ. ಇವುಗಳಲ್ಲಿ ಫಾಕ್ಸ್ ಅವರ ಈಸ್ಟ್ ಇಂಡಿಯಾ ಮಸೂದೆಯ (೧೭೮೩) ಮೇಲಿನ ಬರ್ಕ್ ಅವರ ಪ್ರಸಿದ್ಧ ಭಾಷಣ ಗಮನಾರ್ಹವಾದುದು.

ಮಿಲ್ ಅವರಿಗೆ ಸಂಸತ್ತಿನ ಮೇಲ್ವಿಚಾರಣೆ ಒಂದು ಪರಿಹಾರವೆಂಬಂತೆ ಗೋಚರಿಸಲಿಲ್ಲ. ಅದು ತೀರ್ಮಾನಗಳನ್ನು ರಾಜಕೀಯಗೊಳಿಸುತ್ತದೆ. ಸಾಮ್ರಾಜ್ಯದ ನೀತಿಗಳನ್ನು ಪಕ್ಷ ರಾಜಕೀಯದ ಬಣ ಹೋರಾಟಗಳ ಫಲಿತಾಂಶವನ್ನಾಗಿ ಮಾಡುತ್ತದೆ. ಅದರಲ್ಲಿ ಯಾವುದೇ ತಾಂತ್ರಿಕ ಪರಿಣತಿಗಳ ಬಳಕೆ ಇರುವುದಿಲ್ಲ. ಪಾರ್ಲಿಮೆಂಟಿನ ಕೆಳಮನೆಯ ಸದಸ್ಯರು ಅವರ ಸ್ಥಳೀಯ ಮತದಾರರಿಗೆ ಜವಾಬ್ದಾರರಾಗಿರುವುದರಿಂದ ಸಾಮ್ರಾಜ್ಯದ ನೀತಿಯು ಬ್ರಿಟಿಷರ ಸ್ವಯಂ ಹಿತಾಸಕ್ತಿಯನ್ನು ಗರಿಷ್ಠಗೊಳಿಸುವ ಉದ್ದೇಶವನ್ನು ಮಾತ್ರ ಹೊಂದಿರುತ್ತದೆ; ಅದು ವಸಾಹತುಗಳಿಗೆ ಒಳ್ಳೆಯ ಆಳ್ವಿಕೆಯನ್ನಾಗಲೀ ಆರ್ಥಿಕ ಅಭಿವೃದ್ಧಿಯನ್ನಾಗಲೀ ತರಲಾರದು. ಮಿಲ್ ಅವರು ಸಾಮ್ರಾಜ್ಯಶಾಹಿ ಸರ್ಕಾರದ ದುರಾಡಳಿತದ ಸಮಸ್ಯೆಗೆ ಸಂಸತ್ತಿನ ಮೇಲ್ವಿಚಾರಣೆಯನ್ನು ದೂರವಿರಿಸಿ ಅದರ ಸ್ಥಳದಲ್ಲಿ ಪರಿಣತಿಹೊಂದಿದ ಆಡಳಿತಗಾರರ ವಿಶೇಷ ತಂಡವೊಂದನ್ನು ಸ್ಥಾಪಿಸುವ ಪರಿಹಾರೋಪಾಯವನ್ನು ಸೂಚಿಸಿದರು. ಈ ವಿಶಿಷ್ಟ ಸಮಿತಿಯ ಸದಸ್ಯರು ಸ್ಥಳೀಯ ಪರಿಸ್ಥಿತಿಯ ಜ್ಞಾನವನ್ನು ಗಳಿಸುವ ಸಲುವಾಗಿ ವಿಶೇಷವಾದ ತರಬೇತಿಯನ್ನು ಪಡೆಯುತ್ತಾರೆ. ಸರ್ಕಾರದಿಂದ ವೇತನ ಪಡೆಯುತ್ತಿರುವ ಅವರಿಗೆ ಆರ್ಥಿಕ ಶೋಷಣೆಯಿಂದ ಯಾವುದೇ ರೀತಿಯ ವೈಯಕ್ತಿಕವಾದ ಲಾಭವಿಲ್ಲದಿರುವುದರಿಂದ ವಸಾಹತುದಾರರು ಮತ್ತು ಸ್ಥಳೀಯ ಜನರ ನಡುವಣ ಘರ್ಷಣೆಗಳನ್ನು ನ್ಯಾಯಯುತವಾಗಿ ಬಗೆಹರಿಸಬಹುದು. ಏನೇ ಆದರೂ, ರಾಜಕೀಯ ಅಧಿಕಾರವನ್ನು ಪ್ರಯೋಗಿಸುವವರು ಸ್ಥಳೀಯ ಜನತೆಗೆ ಜವಾಬ್ದಾರರಾಗಿಲ್ಲದಿರುವುದರಿಂದ ಉತ್ತಮ ಪ್ರಭುತ್ವವನ್ನು ನೀಡುವುದು ಹೇಗೆ

ಸಾಧ್ಯ ಎಂಬುದನ್ನು  ವಿವರಿಸಲು ಮಿಲ್ ಅವರು ಶಕ್ತರಾಗಲಿಲ್ಲ. ಈ ಅರ್ಥದಲ್ಲಿ ಮಿಲ್‌ರವರ ಬರವಣಿಗೆಗಳು ಉದಾರ ಸಾಮ್ರಾಜ್ಯಶಾಹಿ  ಚಿಂತನೆಗಳ ವೈಫಲ್ಯದ ಸಂಕೇತವಾಗಿದೆ.

ಹತ್ತೊಂಬತ್ತನೆ ಶತಮಾನದ ಉದಾರವಾದಿ ಚಿಂತಕರು ವಿದೇಶಿ ಪ್ರಭುತ್ವ ಮತ್ತು ವಿಜಯದ ಔಚಿತ್ಯದ ಬಗೆಗೆ ವಿಭಿನ್ನ ರೀತಿಯ ನಿಲುವುಗಳನ್ನು ಹೊಂದಿದ್ದರು. ಉದಾಹರಣೆಗೆ, ಅಲೆಕ್ಸಿ ಡಿ ಟಾಕ್‌ವಿಲ್ "ನಾಗರಿಕಗೊಳಿಸುವ ಧ್ಯೇಯ "  ವನ್ನು ಅವಲಂಬಿಸದಿರುವ ವಸಾಹತುಶಾಹಿಯ ಮಾದರಿಯನ್ನು ಮುಂದಿಡುತ್ತಾರೆ. ವಸಾಹತುಶಾಹಿಯು ಸ್ಥಳೀಯ ಜನರಿಗೆ ಒಳ್ಳೆಯ ಸರ್ಕಾರವನ್ನು ನೀಡಲಿಲ್ಲವೆಂಬುದನ್ನು ಟಾಕ್‌ವಿಲ್ ಗುರುತಿಸುತ್ತಾರೆ. ಆದರೆ, ಈ ಕಾರಣದಿಂದ ಅವರು ವಸಾಹತುಶಾಹಿಯನ್ನು ವಿರೋಧಿಸಲಿಲ್ಲ. ಫ್ರಾನ್ಸ್ ದೇಶಕ್ಕೆ ವಸಾಹತುಶಾಹಿಯು ಲಾಭದಾಯಕವಾಗಿತ್ತೆಂಬ ಕಾರಣವೆಂಬುದನ್ನು ಅವರು ಸಂಪೂರ್ಣವಾಗಿ ಅವಲಂಬಿಸಿದ್ದರು. ಆಲ್ಜೀರಿಯದಲ್ಲಿದ್ದ ಫ್ರೆಂಚ್ ವಸಾಹತುಗಳು ಫ್ರಾನ್ಸ್ ದೇಶದ ಘನತೆಯನ್ನು  ಇಂಗ್ಲೆಂಡಿನ ಘನತೆಗಿಂತ ಹೆಚ್ಚುಮಾಡುತ್ತದೆಯೆಂದು ಟಾಕ್‌ವಿಲ್ ಹೇಳುತ್ತಾರೆ. ಫ್ರಾನ್ಸ್ ದೇಶದ ಹೆಚ್ಚುವರಿ ಜನಸಂಖ್ಯೆಯಿಂದಾಗಿ ಉದ್ಭವಿಸುವ ಅವ್ಯವಸ್ಥೆಗೆ ವಸಾಹತುಗಳು ಪರಿಹಾರವನ್ನೊದಗಿಸುತ್ತದೆಂದು ಅವರು ಹೇಳುತ್ತಾರೆ. ಸಾಮ್ರಾಜ್ಯಶಾಹಿ ಪ್ರಯತ್ನಗಳು ರಾಷ್ಟ್ರಭಕ್ತಿಯ ಭಾವನೆಯನ್ನು ಪ್ರಚೋದಿಸಿ ಆಧುನಿಕ ಭೌತಿಕವಾದ ಮತ್ತು ವರ್ಗ ಸಂಘರ್ಷದ ಶಕ್ತಿಗಳ ವಿರುದ್ಧ ಸಮತೋಲನವನ್ನು ಒದಗಿಸುತ್ತದೆಯೆಂದು ಟಾಕ್‌ವಿಲ್ ಸೂಚಿಸುತ್ತಾರೆ.

ಆಲ್ಜೀರಿಯದಲ್ಲಿ ಫ್ರೆಂಚ್ ವಸಾಹತೀಕರಣವನ್ನು ಮುನ್ನಡೆಸುವುದರಲ್ಲಿ ಟಾಕ್‌ವಿಲ್ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಫ್ರೆಂಚ್ ವಸಾಹತುಶಾಹಿಯ ತಮ್ಮ ಮೊದಲ ವಿಶ್ಲೇಷಣೆಯನ್ನು ೧೮೩೭ರಲ್ಲಿ ಪ್ರಕಟಿಸಿದರು. ಆ ಸಂದರ್ಭದಲ್ಲಿ ಅವರು ಫ್ರೆಂಚ್ ಪ್ರತಿನಿಧಿ ಸಭೆಯ (ಚೇಂಬರ್ ಆಫ್ ಡೆಪ್ಯುಟೀಸ್) ಚುನಾವಣಾ ಪ್ರಚಾರದಲ್ಲಿದ್ದರು. ಪ್ರತಿನಿಧಿ ಸಭೆಯ ಸದಸ್ಯರಲ್ಲೊಬ್ಬರಾಗಿದ್ದ ಅವರು ಆಲ್ಜೀರಿಯದಲ್ಲಿ ಫ್ರೆಂಚ್ ಆಧಿಪತ್ಯವನ್ನು ಇನ್ನಷ್ಟು ವಿಸ್ತರಿಸಬೇಕೆಂದು ವಾದಿಸಿದ್ದರು. ೧೮೪೧ರಲ್ಲಿ ಅವರು ಆಲ್ಜೀರಿಯಾಗೆ ಪ್ರಯಾಣ ಮಾಡಿ "ಆಲ್ಜೀರಿಯಾ ಕುರಿತಾದ ಪ್ರಬಂಧ" ವನ್ನು ಬರೆದರು. ಈ ಪ್ರಬಂಧವು ಈ ವಿಷಯಕ್ಕೆ ಸಂಬಂಧಪಟ್ಟ ಸಂಸತ್ತಿನ ಎರಡು ವರದಿಗಳಿಗೆ ಆಧಾರವಾಗಿದೆ (ಟಾಕ್‌ವಿಲ್ ೨೦೦೧). ನಾಗರಿಕರನ್ನಾಗಿಸುವ ಧ್ಯೇಯದ ಭೋಳೆ ಪ್ರತಿಪಾದಕರಿಗಿಂತ ಭಿನ್ನವಾಗಿ ಟಾಕ್‌ವಿಲ್ ಬರ್ಬರ ಮಿಲಿಟರಿಯ ಬಲದಿಂದ ಒಳ್ಳೆಯ ಪ್ರಭುತ್ವವನ್ನು ಮತ್ತು ಉತ್ತಮ ನಾಗರಿಕತೆಯನ್ನು ಕೊಡಲು ಸಾಧ್ಯವಾಗಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತಾರೆ.  ಇದು ವಾಸ್ತವವಾಗಿ ನಾಲ್ಕು ಹಂತದ ಸ್ಕಾಟಿಷ್ ಎನ್‌ಲೈಟನ್‌ಮೆಂಟ್‌ನ ಸಿದ್ಧಾಂತವು ಸಂಪೂರ್ಣ ತಲೆಕೆಳಗಾದುದನ್ನು ತೋರಿಸುತ್ತಿತ್ತು. "ನಾವು ಈಗ ಈ ಅರಬರಿಗಿಂತಲೂ ಹೆಚ್ಚು ಬರ್ಬರವಾಗಿ ಕಾದಾಡುತ್ತಿದ್ದೇವೆ, ಈಗ ನಾಗರಿಕತೆಯು ನಮ್ಮ ಕಡೆ ಇಲ್ಲ, ಅದು ಅವರ ಕಡೆ ಇದೆ"  ಎಂಬುದನ್ನೂ ಅವರು ಒಪ್ಪಿಕೊಂಡರು. (ಟಾಕ್‌ವೇ ೨೦೦೧:೭೦). ಇಷ್ಟಾದರೂ ಈ ಅರಿವು ಫ್ರೆಂಚ್ ಬರ್ಬರತೆಯ ಖಂಡನೆಯಾಗಿರಲಿಲ್ಲ. ಅದಕ್ಕೆ ಬದಲಿಗೆ ಟಾಕ್‌ವಿಲ್ ಬೆಳೆಗಳ ನಾಶ, ಭೂಮಿಯನ್ನು ವಶಪಡಿಸಿಕೊಳ್ಳುವುದು, ಹಾಗೂ ನಿರಾಯುಧ ನಾಗರಿಕರ ಬಂಧನ ಮುಂತಾದ ವಿವಾದಾಸ್ಪದ ತಂತ್ರಗಳನ್ನು ಸಮರ್ಥಿಸಿಕೊಂಡರು. ಇದಕ್ಕೆ ಅವರ ಬರವಣಿಗೆಯಲ್ಲಿ ಯಾವುದೇ ರೀತಿಯ ತಾತ್ವಿಕ ಸಮರ್ಥನೆಯೂ ಕಂಡು ಬರುವುದಿಲ್ಲ. ಅವರು ನ್ಯಾಯಯುತ ಯುದ್ಧಗಳ ಸಂಪ್ರದಾಯವನ್ನು ಸಂಪೂರ್ಣವಾಗಿ ತಿರಸ್ಕರಿಸುತ್ತಾ ಹೀಗೆ ಹೇಳುತ್ತಾರೆ. "ನಾನು ನಂಬಿರುವಂತೆ ಯುದ್ಧದ ಹಕ್ಕು ನಮಗೆ ಒಂದು ದೇಶವನ್ನು ಧೂಳೀಪಟ ಮಾಡುವ ಅಧಿಕಾರವನ್ನು ನೀಡುತ್ತದೆ"  (ಟಾಕ್‌ವಿಲ್ ೨೦೦೧:೭೦). ಆಲ್ಜೀರಿಯ ಮೇಲಿನ ಟಾಕ್‌ವಿಲ್ ಅವರ ಬರಹಗಳಲ್ಲಿ ಫ್ರೆಂಚ್ ರಾಷ್ಟ್ರದ ಹಿತಾಸಕ್ತಿಯೇ ಅತ್ಯಂತ ಪ್ರಮುಖವಾದುದಾಗಿದ್ದು, ನೈತಿಕ ಪರಿಗಣನೆಗಳು ರಾಜಕೀಯ ಗುರಿಗಳಿಗೆ ಸ್ಪಷ್ಟವಾಗಿ ಶರಣಾಗಿವೆ.

ಟಾಕ್‌ವಿಲ್ ತಮ್ಮ ಆಲ್ಜೀರಿಯಾ ಕುರಿತಾದ ವಿಶ್ಲೇಷಣೆಯಲ್ಲಿ ಅಲ್ಲಿನ ನ್ಯಾಯಸಮ್ಮತತೆಯ ಬಗ್ಗೆ ಯಾವ ಆತಂಕವನ್ನೂ ತೋರಿಸುವುದಿಲ್ಲ. ಬದಲಿಗೆ, ಅಲ್ಲಿನ ವಸಾಹತುಶಾಹಿಯ ಪರಿಣಾಮಕಾರಿ ಆಳ್ವಿಕೆಯ ವ್ಯಾವಹಾರಿಕತೆಯ ಬಗೆಗೆ ಮಾತ್ರ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟಿದ್ದಾರೆ. ಪ್ರಭುತ್ವದ ಸ್ಥಿರತೆಯು ಅಲ್ಲಿ ನೆಲಸಿದ ಫ್ರೆಂಚ್ ನಿವಾಸಿಗಳಿಗೆ ಒಳ್ಳೆಯ ಸರ್ಕಾರವನ್ನೊದಗಿಸುವ ವಸಾಹತುಶಾಹಿಯ ಆಡಳಿತದ ಸಾಮರ್ಥ್ಯವನ್ನು ಅವಲಂಬಿಸಿದೆಯೆಂಬುದು ಅವರ ಅನಿಸಿಕೆಯಾಗಿತ್ತು. ಆಡಳಿತಕ್ಕೆ ಸಂಬಂಧಿಸಿದ ತೀರ್ಮಾನ ತೆಗೆದುಕೊಳ್ಳುವ ಅಧಿಕಾರವೆಲ್ಲವೂ ಪ್ಯಾರಿಸ್‌ನಲ್ಲಿ ಕೇಂದ್ರೀಕೃತವಾಗಿರುವುದು ಹಾಗೂ ಸ್ಥಳೀಯ ಮಿಲಿಟರಿ ಅಧಿಕಾರಿಗಳ ಮನಸೋಇಚ್ಛೆ ಕಾರ್ಯನಿರ್ವಹಣೆ ಇವುಗಳ ಪರಿಣಾಮವಾಗಿ ಅಲ್ಲಿ ಬಂದು ನೆಲಸಿದ ಫ್ರೆಂಚ್ ನಾಗರಿಕರ ಆಸ್ತಿಗೆ ಸರಿಯಾದ ಭದ್ರತೆಯಿಲ್ಲದಿರುವುದು ಮಾತ್ರವಲ್ಲ, ಅವರಿಗೆ ಫ್ರಾನ್ಸ್‌ನಲ್ಲಿ ದೊರೆಯಬಹುದಾಗಿದ್ದ ರಾಜಕೀಯ ಮತ್ತು ನಾಗರಿಕ ಹಕ್ಕುಗಳೂ ಇಲ್ಲಿ ದುರ್ಲಭವಾಗುತ್ತವೆ. ಸ್ಥಳೀಯ ಮೂಲನಿವಾಸಿಗಳ ಮೇಲೆ ಮಿಲಿಟರಿ ಆಳ್ವಿಕೆಯನ್ನು ಹೇರುವುದರ ಬಗ್ಗೆ ಟಾಕ್‌ವಿಲ್‌ಗೆ ಯಾವ ಆಕ್ಷೇಪವೂ ಇರಲಿಲ್ಲ; ಆದರೆ ಅದನ್ನು ಫ್ರೆಂಚರಿಗೆ ಅನ್ವಯಿಸಿದರೆ ಅದು ತದ್ವಿರುದ್ಧ ಪರಿಣಾಮವನ್ನುಂಟುಮಾಡುತ್ತದೆ ಎಂಬುದು ಅವರ ಅಭಿಪ್ರಾಯವಾಗಿತ್ತು. ಟಾಕ್‌ವಿಲ್ ಅವರ ಪ್ರಕಾರ ಆಲ್ಜೀರಿಯದಲ್ಲಿನ ಫ್ರೆಂಚ್ ಪ್ರಯತ್ನಗಳು ಯಶಸ್ಸನ್ನು ಕಾಣಬೇಕಾದರೆ ಶಾಶ್ವತವಾಗಿ ನೆಲೆಸಲು ದೊಡ್ಡ ಸಂಖ್ಯೆಯಲ್ಲಿ ಫ್ರೆಂಚ್ ನಿವಾಸಿಗಳನ್ನು ಆಕರ್ಷಿಸಬೇಕು. ಸ್ಥಳೀಯ ನಿವಾಸಿಗಳ ಸಹಮತವನ್ನು ಇದಕ್ಕಾಗಿ ಪಡೆಯುವುದು ಅಸಾಧ್ಯವೆಂದು ಸಾಬೀತಾಗಿರುವುದರಿಂದ ಅಲ್ಲಿ ವಸಾಹತುದಾರರ ಸ್ಥಿರ ಸಮುದಾಯವೊಂದನ್ನು ಸೃಷ್ಟಿಸದೆ ಆಲ್ಜೀರಿಯವನ್ನು ತನ್ನ ಅಧೀನದಲ್ಲಿಟ್ಟುಕೊಳ್ಳುವುದು ಫ್ರಾನ್ಸ್ ಗೆ ಸಾಧ್ಯವಾಗಲಿಲ್ಲ. ಆಲ್ಜೀರಿಯದ ಸ್ಥಳೀಯ ಜನರನ್ನು ಮಿಲಿಟರಿಯ ಬಲದ ಮೂಲಕ ಆಳಬೇಕಾಯಿತು ಮತ್ತು ಆರ್ಥಿಕ ಲಾಭದ ಆಮಿಷವೊಡ್ಡಿ ಮತ್ತು ಸಾಧ್ಯವಿರುವ ಮಟ್ಟಿಗೆ ಫ್ರಾನ್ಸ್‌ನ ರಾಜಕೀಯ ಮತ್ತು ಸಾಂಸ್ಕೃತಿಕ ವಾತಾವರಣವನ್ನು ಪುನರ್ನಿರ್ಮಾಣ ಮಾಡಿ ಫ್ರೆಂಚ್ ಜನರನ್ನು ಅಲ್ಲಿ ನೆಲೆಸುವಂತೆ ಪ್ರೇರೇಪಿಸಲಾಯಿತು. .ವಿವಿಧ ಜನಾಂಗಗಳ ಸಮ್ಮಿಲನ ಸಾಧ್ಯವೆಂಬ ಆಶಾವಾದವು ಕಾಣಿಸಿಕೊಂಡಿದ್ದ ಸಂಕ್ಷಿಪ್ತ ಅವಧಿಯ ನಂತರ ಟಾಕ್‌ವಿಲ್ ಅವರು "ಆಲ್ಜೀರಿಯಾ ಮೇಲಿನ ಎರಡನೆಯ ಲೇಖನ" ವನ್ನು ಬರೆದರು.(ಟಾಕ್‌ವಿಲ್ ೨೦೦೧:೨೫). ವಸಾಹತುಶಾಹಿ ಪ್ರಪಂಚವು ಸ್ಥಳೀಯರ ಮತ್ತು ವಲಸೆಹೋಗಿ ನೆಲೆಸಿರುವವರ ನಡುವೆ ಶಾಶ್ವತ ವಿರೋಧದಿಂದ ತುಂಬಿರುತ್ತದೆ ಮತ್ತು ಈ ವಿರೋಧವು ವಲಸೆಬಂದು ನೆಲೆಸಿರುವವರಿಗೆ ಆರ್ಥಿಕ ಲಾಭವನ್ನು ಖಚಿತಪಡಿಸಲು ರಚಿಸಿದ್ದಾಗಿತ್ತು ಎಂಬುದನ್ನು ಟಾಕ್‌ವಿಲ್ ಮನಗಂಡಿದ್ದರು.

೪. ಮಾರ್ಕ್ಸ್‌ವಾದ ಮತ್ತು ಲೆನಿನ್‌ವಾದ:-

ಇತ್ತೀಚಿನ ವರ್ಷಗಳಲ್ಲಿ, ವಿದ್ವಾಂಸರು ಮಾರ್ಕ್ಸಿಸ್ಟ್ ಸಂಪ್ರದಾಯದ ಒಳಗಡೆ ಇರುವ ವಸಾಹತುಶಾಹಿಯನ್ನು ಕುರಿತು ಅಷ್ಟಾಗಿ ಚರ್ಚೆಮಾಡುತ್ತಿಲ್ಲ. ಇದು ವಿದ್ವದ್ವಲಯಗಳಲ್ಲಿ ಮತ್ತು ರಾಜಕೀಯ ರಂಗದಲ್ಲಿ ಮಾರ್ಕ್ಸ್‌ವಾದ ದ ಪ್ರಭಾವ ಕಡಿಮೆಯಾಗುತ್ತಿರುವುದನ್ನು ಪ್ರತಿಬಿಂಬಿಸುತ್ತದೆ. ಅದೇನೇ ಇದ್ದರೂ, ಮಾರ್ಕ್ಸ್‌ವಾದ ವು, ವಸಾಹತೋತ್ತರ ಸಿದ್ಧಾಂತ ಮತ್ತು ವಿಶ್ವದಾದ್ಯಂತ ವಸಾಹತು ವಿರೋಧಿ ಸ್ವಾತಂತ್ರ್ಯ ಚಳುವಳಿಗಳೆರಡರ ಮೇಲೂ ತನ್ನ ಪ್ರಭಾವವನ್ನು ಬೀರಿದೆ. ಮಾರ್ಕ್ಸ್ ವಾದಿಗಳು ಐರೋಪ್ಯರ ರಾಜಕೀಯ ವಿಸ್ತರಣೆಯ ಭೌತಿಕ ಆಧಾರದತ್ತ ಗಮನ ಸೆಳೆದಿದ್ದು ನೇರವಾದ ರಾಜಕೀಯ ಆಳ್ವಿಕೆಯು ಅಂತ್ಯಗೊಂಡ ನಂತರವೂ ಆರ್ಥಿಕ ಶೋಷಣೆ ಹೇಗೆ ಮುಂದುವರಿದಿದೆ ಎಂಬುದನ್ನು ವಿವರಿಸಲು ಸಹಾಯಮಾಡುವ ಪರಿಕಲ್ಪನೆಗಳನ್ನು ರೂಪಿಸಿದ್ದಾರೆ.

ಮಾರ್ಕ್ಸ್ ಅವರು ಸ್ವತಃ ವಸಾಹತುಶಾಹಿಯನ್ನು ಕುರಿತು ಸಿದ್ಧಾಂತವನ್ನು ಅಭಿವೃದ್ಧಿಪಡಿಸದಿದ್ದರೂ, ಅವರು ಬಂಡವಾಳವಾದದ ವಿಶ್ಲೇಷಣೆಯಲ್ಲಿ ಹೊಸ ಮಾರುಕಟ್ಟೆಗಳನ್ನು ಅರಸುತ್ತಾ ವಸಾಹತುಗಳನ್ನು ವಿಸ್ತರಿಸುವ ಪ್ರವೃತ್ತಿಯ ಬಗೆಗೆ ಒತ್ತಿ ಹೇಳಿದ್ದರು. ತಮ್ಮ ಪ್ರಸಿದ್ಧ ಕೃತಿಗಳಾದ 'ಕಮ್ಯೂನಿಸ್ಟ್ ಮ್ಯಾನಿಫೆಸ್ಟೊ, ಗ್ರಾಂಡ್‌ರಿಸ್ಸಾ ಹಾಗೂ ಕ್ಯಾಪಿಟಲ್‌ಗಳಲ್ಲಿ ಮಾರ್ಕ್ಸ್ ಅವರು ಮಧ್ಯಮ (ಬೂರ್ಶ್ವಾ) ವರ್ಗವು ಜಾಗತಿಕ ಮಾರುಕಟ್ಟೆಯನ್ನು ಸೃಷ್ಟಿಸುತ್ತಲೇ ಸಾಗುವುದಲ್ಲದೆ ಸ್ವಯಂ ವಿಸ್ತರಣೆಯ ನಿಟ್ಟಿನ ಸ್ಥಳೀಯ ಹಾಗೂ ತನ್ನ ರಾಷ್ಟ್ರೀಯ  ಸರಹದ್ದುಗಳನ್ನು ಸಹ ಅದು ಲೆಕ್ಕಿಸುವುದಿಲ್ಲ ಎಂಬ ಭವಿಷ್ಯವನ್ನು ಹೇಳಿದ್ದರು. ವಿಸ್ತರಣೆ ಎಂಬುದು ಬಂಡವಾಳ ಪದ್ಧತಿಯ, ಅಧಿಕ ಉತ್ಪಾದನೆಯ ಮೂಲ ಚೈತನ್ಯಶೀಲತೆಯಾಗಿರುತ್ತದೆ.  ಉತ್ಪಾದಕರ ನಡುವಣ ಸ್ಪರ್ಧೆಯಿಂದಾಗಿ ಕೆಲಸಗಾರರ ಕೂಲಿ ಕಡಿತಗೊಳ್ಳುತ್ತದೆ. ಅದು ಉಪಭೋಗದ ಕುಸಿತಕ್ಕೆ ಎಡೆ ಮಾಡಿ ಕೊಡುತ್ತದೆ. ಈ ಆರ್ಥಿಕ ಕುಸಿತವನ್ನು ತಡೆಯಲು ಇರುವ ಒಂದೇ ಮಾರ್ಗವೆಂದರೆ ಹೆಚ್ಚುವರಿ ಗ್ರಾಹಕ ವಸ್ತುಗಳನ್ನು ಮಾರಲು ಹೊಸ ಮಾರುಕಟ್ಟೆಗಳನ್ನು ಹುಡುಕುವುದು. ಮಾರ್ಕ್ಸ್ ವಾದಿ ದೃಷ್ಟಿಯಿಂದ ಕೆಲವು ಬಗೆಯ ಸಾಮ್ರಾಜ್ಯಶಾಹಿಯು ಅನಿವಾರ್ಯವಾಗಿರುತ್ತದೆ. ಅಧಿಕ ಸಂಪನ್ಮೂಲಗಳನ್ನು ಹೊಂದಿರುವ ಶ್ರೀಮಂತ ದೇಶಗಳಿಗೆ ಜನರನ್ನು ವಲಸೆಹೋಗುವಂತೆ ಮಾಡುವುದರಿಂದ, ರಾಷ್ಟ್ರವೊಂದು ತನ್ನ ಕೈಗಾರಿಕಾ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ಸೃಷ್ಟಿಸುತ್ತದೆ ಮತ್ತು ಸ್ವಾಭಾವಿಕ ಸಂಪನ್ಮೂಲಗಳಿಗಾಗಿ ಒಂದು ನಂಬಲರ್ಹವಾದ ಮೂಲವನ್ನು ಸಹ ಹುಡುಕಿಕೊಳ್ಳುತ್ತದೆ. ದುರ್ಬಲ ರಾಷ್ಟ್ರಗಳು ತಮ್ಮ ಆಂತರಿಕ ಕೈಗಾರಿಕೆಗಳ ಉತ್ಪನ್ನಗಳನ್ನು ನಿರ್ಲಕ್ಷಿಸಿ ವಿದೇಶಿ ವಸ್ತುಗಳ ಆಮದಿಗೆ ಸ್ವಯಂ ಪ್ರೇರಿತವಾಗಿ ಒಪ್ಪಿ ಕೊಳ್ಳಬೇಕು ಇಲ್ಲವೇ ರಾಜಕೀಯ ಆಧಿಪತ್ಯಕ್ಕೆ ಶರಣಾಗಬೇಕು. ಈ ಎರಡೂ ಪರ್ಯಾಯಗಳ ಪರಿಣಾಮವು ಮಾತ್ರ ಒಂದೇ ಆಗಿರುತ್ತದೆ.

೧೮೫೦ರ ದಶಕದಲ್ಲಿ "ನ್ಯೂಯಾರ್ಕ ಡೈಲಿ ಟ್ರಿಬ್ಯೂನ್" ಪತ್ರಿಕೆಯಲ್ಲಿ ತಾವು ಪ್ರಕಟಿಸಿದ ಸರಣಿ ಲೇಖನಗಳಲ್ಲಿ ಮಾರ್ಕ್ಸ್ ಅವರು ಭಾರತದಲ್ಲಿದ್ದ ಬ್ರಿಟೀಷ್‌ವಸಾಹತುಶಾಹಿಯ ಪರಿಣಾಮಗಳ ಬಗೆಗೆ ಚರ್ಚಿಸಿದರು. ಅವರ ವಿಶ್ಲೇಷಣೆಯು ಮೂಲಭೂತವಾಗಿ ಅವರ ರಾಜಕೀಯ ಹಾಗೂ ಆರ್ಥಿಕ ಬದಲಾವಣೆಯ ಸಿದ್ಧಾಂತಕ್ಕೆ ಅನುಗುಣವಾಗಿತ್ತು. ಭಾರತವು ಮೂಲಭೂತವಾಗಿ ಒಂದು ಊಳಿಗಮಾನ್ಯ ಸಮಾಜವಾಗಿದ್ದು, ಅದು ಆಧುನಿಕೀಕರಣದ ಪ್ರಕ್ರಿಯೆಯ ನೋವನ್ನು ಅನುಭವಿಸುತ್ತಿದೆ ಎಂದು ಅವರು ವರ್ಣಿಸಿದರು. ಅದೇನೇ ಇದ್ದರೂ ಮಾರ್ಕ್ಸ್ ಅವರ ಪ್ರಕಾರ ಭಾರತದ ಊಳಿಗಮಾನ್ಯ ಸಮಾಜವು ಒಂದು ವಿಭಿನ್ನ ಸ್ವರೂಪದ ಆರ್ಥಿಕ ಸಂಘಟನೆಯಾಗಿತ್ತು. ಭಾರತದ ಕೃಷಿಭೂಮಿಯ ಒಡೆತನ ಸಾಮುದಾಯಿಕವಾಗಿದೆ ಎಂಬ ಅವರ ತಪ್ಪು ನಂಬಿಕೆಯೇ ಅವರು ಈ ತೀರ್ಮಾನಕ್ಕೆ ಬರಲು ಕಾರಣವಾಯಿತು. ಮಾರ್ಕ್ಸ್ ಅವರು ಒಂದು ವಿಶಿಷ್ಟ ರೀತಿಯ ವರ್ಗ ಪ್ರಾಬಲ್ಯವನ್ನು ವರ್ಣಿಸಲು "ಪೌರ್ವಾತ್ಯ ನಿರಂಕುಶವಾದ" ವೆಂಬ ಪರಿಕಲ್ಪನೆಯನ್ನು ಬಳಸಿದರು. ರೈತರಿಂದ ಸಂಪನ್ಮೂಲಗಳನ್ನು ಸಂಗ್ರಹಿಸಲು ರಾಜ್ಯಾಧಿಕಾರದ ಮೂಲಕ ತೆರಿಗೆಯನ್ನು ಹೇರಲಾಗುತ್ತಿತ್ತು. ಇದನ್ನು ಅವರು ಒಂದು ಬಗೆಯ ವರ್ಗದ ಆಧಿಪತ್ಯ ಎಂದು ಕರೆದರು. ಮಾರ್ಕ್ಸ್ ಅವರ ಪ್ರಕಾರ ಕೃಷಿಯ ಉತ್ಪಾದನೆಯು ಸರ್ಕಾರವು ಮಾತ್ರವೇ ಹಣಕಾಸನ್ನು ಒದಗಿಸಬಹುದಾದ ಬೃಹತ್-ಪ್ರಮಾಣದ ಸಾರ್ವಜನಿಕ ನೀರಾವರಿ ಕಾರ್ಯಗಳ ಮೇಲೆ ಅವಲಂಬಿತವಾಗಿದ್ದುದರಿಂದ ಭಾರತದಲ್ಲಿ ಪೌರ್ವಾತ್ಯ ನಿರಂಕುಶವಾದ ಉದಯಿಸಿತು. ಇದರ ಅರ್ಥವೆಂದರೆ ಕೇಂದ್ರೀಕೃತ ಆಡಳಿತವನ್ನು ಬದಲಿಸಿ ಹೆಚ್ಚು ವಿಕೇಂದ್ರೀಕೃತವಾದ ವ್ಯವಸ್ಥೆಯನ್ನು ಸುಲಭದಲ್ಲಿ ಅಲ್ಲಿ ತರಲಾಗುವುದಿಲ್ಲ. ಪಶ್ಚಿಮ ಯೂರೋಪಿನಲ್ಲಿ ಊಳಿಗಮಾನ್ಯ ಆಸ್ತಿಯನ್ನು ಕ್ರಮೇಣವಾಗಿ ಖಾಸಗೀ ಒಡೆತನದ ಹಸ್ತಾಂತರಣೀಯ ಭೂಮಿಯಾಗಿ ಮಾರ್ಪಡಿಸಬಹುದಾಗಿತ್ತು. ಭಾರತದಲ್ಲಿನ ಭೂಮಿಯ ಸಾಮುದಾಯಿಕ ಒಡೆತನ ಇದನ್ನು ಅಸಾಧ್ಯವಾಗಿಸುತ್ತದೆ. ಆ

ಕಾರಣದಿಂದ ಅದು ವಾಣಿಜ್ಯ ಕೃಷಿಯ ಅಭಿವೃದ್ಧಿ ಹಾಗೂ ಮುಕ್ತ ಮಾರುಕಟ್ಟೆಗಳಿಗೆ ತಡೆಯೊಡ್ಡುತ್ತದೆ. ಪೌರ್ವಾತ್ಯ ನಿರಂಕುಶವಾದವು ಸ್ಥಳೀಯ ಆರ್ಥಿಕ ಆಧುನಿಕೀಕರಣಕ್ಕೆ ಪ್ರತಿರೋಧವನ್ನು ಒಡ್ಡಿದ್ದರಿಂದ, ಬ್ರಿಟಿಷ್ ಆಧಿಪತ್ಯವು ಆರ್ಥಿಕ ಆಧುನಿಕೀಕರಣದ ರೂವಾರಿಯಾಯಿತು.

ವಸಾಹತುಶಾಹಿಯು ಹಿಂದುಳಿದ ಊಳಿಗಮಾನ್ಯ ಸಮಾಜದಲ್ಲಿ ಆಧುನಿಕೀಕರಣವನ್ನು ತರುವ ಪ್ರಗತಿಪರ ಶಕ್ತಿ ಎಂಬ ಮಾರ್ಕ್ಸ್‌ರವರ ವಿಶ್ಲೇಷಣೆ ವಿದೇಶಿ ಪ್ರಾಬಲ್ಯವನ್ನು ಮುಚ್ಚುಮರೆಯಿಲ್ಲದೆ ತರ್ಕಬದ್ಧಗೊಳಿಸಿದಂತೆ ತೋರುತ್ತದೆ. ಬ್ರಿಟಿಷ್ ಆಧಿಪತ್ಯದ ಬಗೆಗಿನ ಅವರ ವಿಶ್ಲೇಷಣೆ ಯುರೋಪಿಯನ್ ಬಂಡವಾಳವಾದದ ಬಗ್ಗೆ ಅವರು ತೋರಿಸಿರುವ ದ್ವಂದ್ವ ನೀತಿಯನ್ನೆ ಪ್ರತಿಬಿಂಬಿಸುತ್ತದೆ. ಊಳಿಗಮಾನ್ಯ ಸಮಾಜದಿಂದ ಬೂರ್ಶ್ವಾ ಸಮಾಜಕ್ಕೆ ಸ್ಥಿತ್ಯಂತರ ಹೊಂದುವಾಗ ಜನರಿಗೆ ಉಂಟಾದ ಅಪಾರವಾದ ನೋವನ್ನು ಮಾರ್ಕ್ಸ್‌ರವರು ಗುರುತಿಸಿದ್ದಾರೆ. ಆದರೆ ಈ ಸ್ಥಿತ್ಯಂತರವು ಆವಶ್ಯಕ ಎಂದು ಸಮರ್ಥಿಸಿಕೊಂಡು ಅಂತಿಮವಾಗಿ ಪ್ರಗತಿಪರವೆಂಬುದನ್ನು ಒತ್ತಿ ಹೇಳುತ್ತಾರೆ. ವಿದೇಶಿ ವಾಣಿಜ್ಯದ ಪ್ರವೇಶವು ಭಾರತದಲ್ಲಿ ಸಾಮಾಜಿಕ ಕ್ರಾಂತಿಗೆ ಕಾರಣವಾಗುತ್ತದೆಂದು ಅವರು ವಾದಿಸುತ್ತಾರೆ. ಈ ರೀತಿಯ ವಿಪ್ಲವವು ಧನಾತ್ಮಕ ಹಾಗೂ ಋಣಾತ್ಮಕವಾದ ಎರಡೂ ಪರಿಣಾಮಗಳನ್ನು ಹೊಂದಿರುತ್ತದೆಂದು ಮಾರ್ಕ್ಸ್ ಹೇಳುತ್ತಾರೆ. ರೈತರು ತಮ್ಮ ಸಾಂಪ್ರದಾಯಿಕ ಜೀವನೋಪಾಯಗಳನ್ನು ಕಳೆದುಕೊಂಡಾಗ ಅದು ಅವರಿಗೆ ಅಪರಿಮಿತ ನೋವಿಗೆ ಕಾರಣವಾಗುತ್ತದೆಂದು ಅವರು ಹೇಳುತ್ತಾರೆ. ಆದರೆ ಸಾಂಪ್ರದಾಯಿಕ ಗ್ರಾಮೀಣ ಸಮುದಾಯಗಳ ಜೀವನ ನಾವು ತಿಳಿದಂತೆ ಮನೋಹರವಾಗಿರುವುದಿಲ್ಲ. ಅವುಗಳು ಜಾತಿ ತಾರತಮ್ಯ, ದೌರ್ಜನ್ಯ, ಗುಲಾಮಗಿರಿ, ಕಡು ಬಡತನ ಮತ್ತು ಕ್ರೌರ್ಯದ ತಾಣಗಳಾಗಿವೆ ಎಂದು ಹೇಳುತ್ತಾರೆ. ಆಧುನಿಕೀಕರಣ ಪ್ರಕ್ರಿಯೆಯ ಮೊದಲ ಹಂತ ಸಂಪೂರ್ಣವಾಗಿ ನಕಾರಾತ್ಮಕವಾಗಿದೆ. ಏಕೆಂದರೆ ಬ್ರಿಟಿಷ್ ಆಳ್ವಿಕೆ ಬೆಂಬಲಿಸಲು ಬಡಜನರು ಅಪಾರ ಮೊತ್ತದ ತೆರಿಗೆ ಸಂದಾಯ ಮಾಡಬೇಕಾಗುತ್ತದೆ. ಜೊತೆಗೆ ಬ್ರಿಟನಿನಲ್ಲಿ ಅಗ್ಗವಾಗಿ ಉತ್ಪಾದಿಸಿದ ಹೇರಳ ಪ್ರಮಾಣದ ಹತ್ತಿ ಬಟ್ಟೆಯ ದೆಸೆಯಿಂದ ಉಂಟಾದ ಆರ್ಥಿಕ ವಿಪ್ಲವಗಳನ್ನು ಸಹಿಸಿಕೊಳ್ಳಬೇಕಾಗುತ್ತದೆ. ಅದೇನೇ ಇದ್ದರೂ ಬ್ರಿಟಿಷರು ಉತ್ಪಾದನೆಯನ್ನು ಸಮರ್ಥವಾಗಿ ನಿರ್ವಹಿಸದೇ ಹೋದರೆ ಭಾರತೀಯರು ಬ್ರಿಟನ್ನಿನಿಂದ ಬಟ್ಟೆಯನ್ನು ಆಮದು ಮಾಡಿಕೊಳ್ಳಲು ಅಥವಾ ಬ್ರಿಟಿಷ್ ಆಡಳಿತಕ್ಕೆ ಹಣ ಪಾವತಿ ಮಾಡಲು ಶಕ್ತರಾಗುವುದಿಲ್ಲವೆಂಬುದನ್ನು ಕೊನೆಗೂ ಬ್ರಿಟಿಷ್ ವರ್ತಕರು ಅರಿತುಕೊಂಡರು. ಬ್ರಿಟಿಷ್ ಆಡಳಿತವು ಸಮರ್ಥ ರೀತಿಯಲ್ಲಿ ಪರಿಣಾಮಕಾರಿಯಾಗಿ ವ್ಯಾಪಾರಕ್ಕೆ ವಸ್ತುಗಳನ್ನು ಉತ್ಪಾದನೆ ಮಾಡಿದ್ದ ಪಕ್ಷದಲ್ಲಿ ಅದು ಬ್ರಿಟಿಷರು ಮೂಲಭೂತ ವ್ಯವಸ್ಥೆ ಮತ್ತು ಉತ್ಪಾದನೆಗಾಗಿ ಹೂಡಿದ್ದ ಬಂಡವಾಳಕ್ಕೆ ಪ್ರತಿಫಲ ನೀಡುತ್ತಿತ್ತು. ಬ್ರಿಟಿಷ್ ಆಳ್ವಿಕೆ ದುರಾಸೆಯ ಉದ್ದೇಶವನ್ನು ಹೊಂದಿದ್ದು ಕ್ರೌರ್ಯದಿಂದ ತನ್ನ ನೀತಿಯನ್ನು ಅನುಷ್ಠಾನ ಮಾಡುತ್ತಿತ್ತೆಂಬುದು ಮಾರ್ಕ್ಸ್‌ರವರ ನಂಬಿಕೆಯಾಗಿದ್ದರೂ, ಅದು ಪ್ರಗತಿಯ ಹರಿಕಾರನಾಗಿತ್ತೆಂಬುದು ಅವರ ಅನಿಸಿಕೆಯಾಗಿತ್ತು. ಹಾಗಾಗಿ ಭಾರತದಲ್ಲಿನ ಬ್ರಿಟಿಷ್ ಆಳ್ವಿಕೆಯ ಮೇಲಿನ ಮಾರ್ಕ್ಸ್‌ರವರ ಚರ್ಚೆ ಮೂರು ಆಯಾಮಗಳನ್ನು ಹೊಂದಿದೆ: ಈ ಚರ್ಚೆಯು ಮೊದಲನೆಯದಾಗಿ ಬ್ರಿಟಿಷ್ ಆಳ್ವಿಕೆಯು ಕೆಲವೊಂದು ಪ್ರಗತಿಪರ ಲಕ್ಷಣಗಳನ್ನು ಹೊಂದಿದೆ ಎಂಬುದನ್ನು ಗುರುತಿಸುತ್ತದೆ. ಎರಡನೆಯದಾಗಿ, ಅದು ಬ್ರಿಟಿಷ್ ಆಳ್ವಿಕೆಯ ಮಾನವ ಯಾತನೆಯನ್ನು ಕುರಿತು ವಿಶ್ಲೇಷಿಸುತ್ತದೆ; ಮತ್ತು ಅಂತಿಮವಾಗಿ, ಬ್ರಿಟಿಷ್ ಆಳ್ವಿಕೆಯ ಪ್ರಗತಿಪರ ಉದ್ದೇಶಗಳು ಸಾಕಾರಗೊಳ್ಳಬೇಕಿದ್ದರೆ ಅದು ದೀರ್ಘಕಾಲೀನವಾದದ್ದಾಗಿರಬಾರದು.

ಸಾಮ್ರಾಜ್ಯಶಾಹಿತ್ವ; ಬಂಡವಾಳಶಾಹಿತ್ವದ ಅತ್ಯುನ್ನತ ಹಂತ" ಎಂಬ ಬರಹದಲ್ಲಿ ಲೆನಿನ್, ಆರ್ಥಿಕ ಮತ್ತು ರಾಜಕೀಯ ಆಧಿಪತ್ಯದ ವಿಶ್ಲೇಷಣೆಯನ್ನು ಮಾಡಿದ್ದಾರೆ (೧೯೧೭) (ನೋಡಿ: ಇತರ ಅಂತರ್ಜಾಲ ಸಂಪನ್ಮೂಲಗಳು). ಲೆನಿನ್ ಅವರು

ಸಾಮ್ರಾಜ್ಯಶಾಹಿಯ ಬಗೆಗೆ ಹೆಚ್ಚು ಮುಕ್ತವಾದ ಹಾಗೂ ಖಂಡನಾತ್ಮಕವಾದ ನಿಲುವನ್ನು ತೆಗೆದುಕೊಂಡಿದ್ದಾರೆ. ಐರೋಪ್ಯ ರಾಷ್ಟ್ರಗಳು ತಮ್ಮ ಅನಿವಾರ್ಯವಾದ ಆಂತರಿಕ ಕ್ರಾಂತಿಸಂಬಂಧಿ ಬಿಕ್ಕಟ್ಟುಗಳನ್ನು ಮುಂದೂಡಲು ತಮ್ಮ ಆರ್ಥಿಕ ಹೊರೆಗಳನ್ನು ದುರ್ಬಲ ರಾಷ್ಟ್ರಗಳಿಗೆ ರಫ್ತು ಮಾಡುವ ತಂತ್ರವೇ ಸಾಮ್ರಾಜ್ಯಶಾಹಿ ಎಂಬ ಅಂಶವನ್ನು ಲೆನಿನ್ ಗಮನಿಸಿದ್ದಾರೆ. ಹತ್ತೊಂಬತ್ತನೇ ಶತಮಾನದ ಕಡೆಯ ಭಾಗದ ಸಾಮ್ರಾಜ್ಯಶಾಹಿಯು 'ಇತ್ತೀಚಿನ ಬಂಡವಾಳವಾದ ' ದ ಆರ್ಥಿಕತೆಯ ತರ್ಕದಿಂದ ಮುಂದುವರಿಯುತ್ತಿದೆ ಎಂದು ಲೆನಿನ್ ವಾದಿಸಿದರು. ಕುಸಿಯುತ್ತಿರುವ ಲಾಭದ ಪ್ರಮಾಣ ಆರ್ಥಿಕ ಬಿಕ್ಕಟ್ಟಿಗೆ ಕಾರಣವಾಗಿದ್ದು ಅದರ ಪರಿಹಾರ ಪ್ರಾದೇಶಿಕ ವಿಸ್ತರಣೆಯಿಂದ ಮಾತ್ರ ಸಾಧ್ಯವೆಂಬುದು ಅವರ ವಿಚಾರವಾಗಿತ್ತು. ಬಂಡವಾಳಶಾಹಿ ಕೂಟಗಳು ಮಾರುಕಟ್ಟೆ ಮತ್ತು ಸಂಪನ್ಮೂಲಗಳನ್ನು ಅರಸುತ್ತಾ ತಮ್ಮ ರಾಷ್ಟ್ರೀಯ ಗಡಿರೇಖೆಗಳಾಚೆಗೆ ವಿಸ್ತರಿಸುವ ಒತ್ತಡಕ್ಕೊಳಗಾಗಿದ್ದವು. ಒಂದು ರೀತಿಯಲ್ಲಿ ಈ ವಿಶ್ಲೇಷಣೆ ಮಾರ್ಕ್ಸ್‌ವರ ಚಿಂತನೆಗಳೊಂದಿಗೆ ಸಂಪೂರ್ಣವಾಗಿ ಹೊಂದಿಕೊಳ್ಳುತ್ತದೆ. ಮಾರ್ಕ್ಸ್ ಗಮನಿಸಿದಂತೆ ಐರೋಪ್ಯ ವಸಾಹತುಶಾಹಿ ವಿವಿಧ ದೇಶಗಳೊಳಗೆ ಆಂತರಿಕವಾಗಿ, ಮತ್ತು ಯೂರೋಪಿನಾದ್ಯಂತ, ಸತತವಾಗಿ ವಿಸ್ತರಣೆಗೊಂಡ ಪ್ರಕ್ರಿಯೆಯಾಗಿತ್ತು. ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿಗಳೆರಡೂ ಯೂರೋಪಿನ ಪರಿಧಿಯಲ್ಲಿರುವ ಪ್ರದೇಶಗಳ ಆರ್ಥಿಕ ಅಭಿವೃದ್ಧಿ ಮತ್ತು ಆಧುನೀಕರಣವೆಂಬ ಒಂದೇ ತರ್ಕದಿಂದ ಬಂದ ಫಲಿತಾಂಶವೆಂಬುದು ಮಾರ್ಕ್ಸ್ ಮತ್ತು ಲೆನಿನ್ ಇಬ್ಬರ ಚಿಂತನೆಯೂ ಆಗಿತ್ತು. ಆದರೆ ಲೆನಿನ್‌ರವರ ವಿಶ್ಲೇಷಣೆಯಲ್ಲಿ ಒಂದು ವಿಶಿಷ್ಟ ಅಂಶವಿದೆ. ಇತ್ತೀಚಿನ-ಬಂಡವಾಳವಾದವು ರಾಷ್ಟ್ರೀಯ ಏಕಸ್ವಾಮ್ಯಗಳ ಸುತ್ತ ಸಂಘಟಿತವಾಗಿದ್ದು, ದೇಶದೇಶಗಳ ನಡುವೆ ಮಾರುಕಟ್ಟೆಗಾಗಿ ನಡೆದ ಸ್ಪರ್ಧೆಯು ತಮ್ಮ ಆರ್ಥಿಕ ಲಾಭಕ್ಕಾಗಿ ಹೊರದೇಶಗಳನ್ನು ಆಕ್ರಮಿಸಿಕೊಳ್ಳುವ ಉದ್ದೇಶದ ಮಿಲಿಟರಿ ಹೋರಾಟದ ಸ್ವರೂಪವನ್ನು ಪಡೆದುಕೊಂಡಿತು.

ರೋಸ ಲಕ್ಸೆಂಬರ್ಗ್, ಕಾರ್ಲ್ ಕೌಟ್‌ಸ್ಕಿ ಮತ್ತು ನಿಕೊಲಾಯ್ ಬುಕಾರಿನ್ ಮುಂತಾದವರನ್ನೊಳಗೊಂಡ ಮಾರ್ಕ್ಸಿಸ್ಟ್ ಸಿದ್ಧಾಂತಿಗಳು ಸಹ ಸಾಮ್ರಾಜ್ಯಶಾಹಿಯ ವಿಷಯವನ್ನು ಕುರಿತು ಸಂಶೋಧನೆ ಮಾಡಿದ್ದಾರೆ. ಇದರಲ್ಲಿ ಕೌಟ್‌ಸ್ಕಿಯವರ ಸ್ಥಾನವು ವಿಶೇಷ ಮಹತ್ವವನ್ನು ಪಡೆದಿದೆ. ಏಕೆಂದರೆ ಅವರ ವಿಶ್ಲೇಷಣೆಯು ಸಮಕಾಲೀನ ವಿಶ್ವವ್ಯವಸ್ಥೆಯ ಸಿದ್ಧಾಂತಗಳಲ್ಲಿ ಹಾಗೂ ವಸಾಹತೋತ್ತರ ಅಧ್ಯಯನಗಳಲ್ಲಿ ಪ್ರಧಾನ ಪಾತ್ರ ವಹಿಸುವ ಪರಿಕಲ್ಪನೆಗಳನ್ನು ಪರಿಚಯಿಸಿದೆ. ಸಾಮ್ರಾಜ್ಯಶಾಹಿಯು ಆರ್ಥಿಕ ಶೋಷಣೆಗೆ ಒಳಪಟ್ಟ ಪ್ರದೇಶಗಳ ಅಭಿವೃದ್ಧಿಗೆ ಎಡೆಮಾಡಿಕೊಡುತ್ತದೆಂಬ ಗ್ರಹಿಕೆಗಳನ್ನು ಕಾರ್ಲ್ ಕೌಟ್‌ಸ್ಕಿ ಪ್ರಶ್ನಿಸುತ್ತಾರೆ. ಸಾಮ್ರಾಜ್ಯಶಾಹಿಯು ಎರಡು ರಾಷ್ಟ್ರಗಳ ನಡುವಣ ಸಂವಹನದ ಸ್ವರೂಪವನ್ನು ರೂಪಿಸುವ ಒಂದು ಶಾಶ್ವತವಾದ ಸಂಬಂಧವಾಗಿದೆ. (ಯಂಗ್ ೨೦೦೧). ಪ್ರಾರಂಭದಲ್ಲಿ ಸಾಮ್ರಾಜ್ಯಶಾಹಿಯು ಬಂಡವಾಳಶಾಹಿ ರಾಷ್ಟ್ರಗಳ ನಡುವಣ ಮಿಲಿಟರಿ ಸ್ಪರ್ಧೆಯ ಸ್ವರೂಪವನ್ನು ಹೊಂದಿದ್ದರೂ, ಅಭಿವೃದ್ಧಿಯನ್ನು ಕಾಣದಿರುವ ದೇಶಗಳನ್ನು ಶೋಷಣೆ ಮಾಡುವುದಕ್ಕೆ ಒಂದು ಸ್ಥಿರವಾದ ವ್ಯವಸ್ಥೆಯನ್ನು ರೂಪಿಸಲು ಬಂಡವಾಳಶಾಹಿ ಹಿತಾಸಕ್ತಿಗಳ ನಡುವಿನ ಒಳಸಂಚಾಗಿ ಬದಲಾಗುತ್ತದೆ. ಇಮ್ಯಾನುಯಲ್ ವಾಲರ್‌ಸ್ಟೈನ್ ಈ ನಿಲುವಿನ ಸಮಕಾಲೀನ ಪ್ರತಿಪಾದಕರಲ್ಲಿ ಅತ್ಯಂತ ಪ್ರಭಾವಶಾಲಿಯಾಗಿದ್ದಾರೆ. ಅವರು ತಮ್ಮ ವಿಶ್ವ-ವ್ಯವಸ್ಥೆಗಳ ಸಿದ್ಧಾಂತದಿಂದಾಗಿ ಪ್ರಸಿದ್ಧರಾಗಿದ್ದಾರೆ. ಈ ಸಿದ್ಧಾಂತದ ಪ್ರಕಾರ ವಿಶ್ವ-ವ್ಯವಸ್ಥೆಯೆಂಬುದು ಕೇಂದ್ರ ಮತ್ತು ಅದರ ಪರಿಧೀಯ ರಾಜ್ಯಗಳ ನಡುವಣ ಒಂದು ಸಾಪೇಕ್ಷವಾಗಿ ಸ್ಥಿರವಾಗಿರುವ ಸಂಬಂಧ. ಈ ಅಂತಾರಾಷ್ಟ್ರೀಯ ಶ್ರಮ ವಿಭಜನೆಯನ್ನು ಕೇಂದ್ರದ ಲಾಭಕ್ಕಾಗಿ ರಚಿಸಲಾಗಿದ್ದು ಅದು ಅಧೀನ ರಾಜ್ಯಗಳ ಸಂಪನ್ಮೂಲಗಳನ್ನು ಕೇಂದ್ರಕ್ಕೆ ವರ್ಗಾಯಿಸುತ್ತದೆ (ವಾಲರ್‌ಸ್ಟೈನ್ ೧೯೭೪-೧೯೮೯).

೫. ವಸಾಹತೋತ್ತರ ಸಿದ್ಧಾಂತಗಳು

ವಿಶ್ವ-ವ್ಯವಸ್ಥೆಗಳ ಸಿದ್ಧಾಂತದ ದೃಷ್ಟಿಯಿಂದ ಅಧೀನ ಪ್ರದೇಶಗಳ ಆರ್ಥಿಕ ಶೋಷಣೆಗೆ ನೇರವಾದ ರಾಜಕೀಯ ಅಥವಾ ಮಿಲಿಟರಿ ಆಧಿಪತ್ಯವು ಆವಶ್ಯಕವಲ್ಲ. ಹಿಂದಿನ ವಸಾಹತುಗಳು ಸ್ವಾತಂತ್ರ್ಯಗಳಿಸಿದ ನಂತರವೂ, ಪರಾಧೀನತೆಯ ತರ್ಕದ ಪ್ರಭಾವವು ತಮ್ಮ ಮೇಲೆ ಇದೆಯೆಂಬ ಮನಃಸ್ಥಿತಿಯಲ್ಲಿಯೇ ನಡೆದುಕೊಳ್ಳುತ್ತಿರುತ್ತವೆ ಎಂಬುದರತ್ತ ಸಮಕಾಲೀನ ಸಾಹಿತ್ಯದ ಸಿದ್ಧಾಂತಿಗಳು ಗಮನವನ್ನು ಸೆಳೆಯುತ್ತಾರೆ. ವಸಾಹತೋತ್ತರ ಅಧ್ಯಯನಗಳ ಕ್ಷೇತ್ರವು ಎಡ್ವರ್ಡ್ ಸಯೀದ್ ಅವರ ಅಮೋಘ ಪುಸ್ತಕ "ಪೌರ್ವಾತ್ಯವಾದ" ದಿಂದ (ಓರಿಯೆಂಟಲಿಸಂ) ತೀವ್ರವಾಗಿ ಪ್ರಭಾವಿತವಾಗಿದೆ. 'ಪೌರ್ವಾತ್ಯವಾದ' ದಲ್ಲಿ ಮಧ್ಯಪ್ರಾಚ್ಯದ ಕುರಿತಾದ ಜ್ಞಾನದ ಉತ್ಪಾದನೆಗಾಗಿ ಸಯೀದ್ ಅವರು ಮಿಷೆಲ್ ಫೂಕೊ ಅವರ ಚರ್ಚೆಯ ವಿಶ್ಲೇಷಣೆಯ ತಂತ್ರಗಳನ್ನು ಅಳವಡಿಸಿಕೊಂಡಿದ್ದಾರೆ. ಐರೋಪ್ಯೇತರ ಜನರ ಕುರಿತಾದ ಜ್ಞಾನವನ್ನು ಉತ್ಪಾದಿಸಿ, ವ್ಯಾಖ್ಯಾನಿಸಿ, ಮೌಲ್ಯಮಾಪನ ಮಾಡಲು ಬಳಸಿದ ಪರಿಕಲ್ಪನೆಗಳು, ಗ್ರಹಿಕೆಗಳು ಹಾಗೂ ತಾರ್ಕಿಕತೆ ಇವುಗಳನ್ನೊಳಗೊಂಡು ರೂಪಿಸಲ್ಪಟ್ಟ ಪದ್ಧತಿಯನ್ನು ಪೌರ್ವಾತ್ಯವಾದವು (ಓರಿಯೆಂಟಲಿಸಂ) ವಿವರಿಸುತ್ತದೆ. ಸಾಹಿತ್ಯಿಕ ಮತ್ತು ಚಾರಿತ್ರಿಕ ದಾಖಲೆಗಳಲ್ಲಿದ್ದ ಸಾಮ್ರಾಜ್ಯಶಾಹಿ ಯೋಜನೆಗಳನ್ನು ಪ್ರತಿಬಿಂಬಿಸುವ ಹಾಗೂ ಬಲಪಡಿಸುವ ವಿಚಾರಗಳಲ್ಲಿ ಸುಸಂಗತೆ ಇಲ್ಲ ಎಂಬುದನ್ನು ವಿದ್ವಾಂಸರು ಅರ್ಥಮಾಡಿಕೊಳ್ಳಲು ಸಯೀದ್ ಅವರ ವಿಶ್ಲೇಷಣೆ ಸಹಾಯ ಮಾಡಿತು. ಹಿಂದಿನ ಅಧ್ಯಯನಗಳು ವಸಾಹತುಶಾಹಿಯ ರಾಜಕೀಯ ಮತ್ತು ಆರ್ಥಿಕ ತರ್ಕಗಳ ಮೇಲೆ ಮಾತ್ರ ಕೇಂದ್ರಿತವಾಗಿದ್ದವು. ಆದರೆ, ಅದಕ್ಕಿಂತ ವಿಭಿನ್ನವಾಗಿ ಸಯೀದ್ ಅವರು ಜ್ಞಾನ ಮತ್ತು ಅಧಿಕಾರದ ನಡುವಣ ಸಂಬಂಧದ ಬಗೆಗೆ ಗಮನ ಸೆಳೆಯತ್ತಾರೆ. ಸಾಮ್ರಾಜ್ಯಶಾಹಿಯ ಸಾಂಸ್ಕೃತಿಕ ಮತ್ತು ಜ್ಞಾನಮೀಮಾಂಸೆಯ ಕಾರ್ಯಗಳನ್ನು ಮುನ್ನೆಲೆಗೆ ತರುವ ಸಯೀದ್ ಅವರು ಜ್ಞಾನ ಮೌಲ್ಯರಹಿತವಾದುದೆಂಬ ವೈಚಾರಿಕ ಪರಿಕಲ್ಪನೆಯನ್ನು ಅಲ್ಲಗಳೆಯಲು ಸಮರ್ಥರಾಗಿ "ಪೌರ್ವಾತ್ಯವನ್ನು ತಿಳಿಯುವುದು" ಅದರ ಮೇಲೆ ಪ್ರಭುತ್ವವನ್ನು ಹೊಂದುವ ಯೋಜನೆಯ ಒಂದು ಭಾಗವೆಂದು ತಿಳಿಸಿಕೊಡುತ್ತಾರೆ. ಪೌರ್ವಾತ್ಯವಾದವೆಂಬುದನ್ನು ಪಾಶ್ಚಾತ್ಯ ಜ್ಞಾನಶಾಸ್ತ್ರದ ಸಂರಚನಾವಾದೋತ್ತರ ಟೀಕೆಗಳ ಭೌಗೋಲಿಕ ಹಾಗೂ ಚಾರಿತ್ರಿಕ ವ್ಯಾಪ್ತಿಯನ್ನು ಹಿಗ್ಗಿಸುವ ಯತ್ನವಾಗಿ ನೋಡಬಹುದು.

ಪೌರ್ವಾತ್ಯವಾದವೆಂಬ ಉಕ್ತಿಯನ್ನು ಸಯೀದ್ ಅವರು ಹಲವಾರು ವಿಭಿನ್ನ ರೀತಿಗಳಲ್ಲಿ ಉಪಯೋಗಿಸಿದ್ದಾರೆ. ಮೊದಲನೆಯದಾಗಿ, ಪೌರ್ವಾತ್ಯವಾದವು ಮಧ್ಯಪ್ರಾಚ್ಯ ಮತ್ತು ಏಷ್ಯಾ ಬಗೆಗಿನ ಶೈಕ್ಷಣಿಕ ಅಧ್ಯಯನದ ಒಂದು ವಿಶಿಷ್ಟವಾದ ಕ್ಷೇತ್ರ. ಆದರೆ ಸಯೀದ್ ಅವರು ಅದನ್ನು ವಿಸ್ತರಿಸಿ ಇತಿಹಾಸ, ಸಮಾಜಶಾಸ್ತ್ರ, ಸಾಹಿತ್ಯ, ಮಾನವ ಶಾಸ್ತ್ರ ಮತ್ತು ವಿಶೇಷವಾಗಿ ಭಾಷಾಶಾಸ್ತ್ರ ಇವುಗಳೆಲ್ಲವನ್ನೂ ಅದು ಆವರಿಸಿಕೊಳ್ಳುವಂತೆ ಮಾಡಿದ್ದಾರೆ. ಅದರ ಜೊತೆಗೆ, ಪೌರ್ವಾತ್ಯವಾದವು ಯೂರೋಪನ್ನು ವ್ಯಾಖ್ಯಾನಿಸುವಲ್ಲಿ ಸಹಾಯಕವಾಗುತ್ತದೆಂದು ಗುರುತಿಸುತ್ತಾರೆ. ಒಂದು ಸ್ಥಿರವಾದ ವರ್ಣನೆಯನ್ನು ಸೃಷ್ಟಿಸುವ ಮೂಲಕ ಅವರು ಯೂರೋಪಿನ ಇನ್ನೊಂದು ಮುಖ್ಯವಾದ ಬಾಹ್ಯಮುಖವನ್ನು ಪರಿಚಯಿಸುತ್ತಾರೆ. ಪೌರ್ವಾತ್ಯವಾದವೆಂಬುದು ಯೂರೋಪಿನ ಗುಣಲಕ್ಷಣಗಳನ್ನು ತೋರಿಸುತ್ತದೆಂದು ಅವರು ಹೇಳುತ್ತಾರೆ. ಎರಡು ವಿರುದ್ಧಾತ್ಮಕ ವಿಚಾರಗಳ ಆಧಾರದ ಮೇಲೆ (ವೈಚಾರಿಕ/ಅವೈಚಾರಿಕ, ಮನಸ್ಸು/ದೇಹ, ವ್ಯವಸ್ಥೆ/ಅವ್ಯವಸ್ಥೆ) ತುಲನೆ ಮಾಡುತ್ತಾ ಯೂರೋಪಿನ ಗುಣಲಕ್ಷಣಗಳನ್ನು ವಿವರಿಸುತ್ತಾರೆ. ಇದು ಯೂರೋಪಿನ ತಲ್ಲಣಗಳನ್ನು ನಿವಾರಿಸುತ್ತದೆ. ಅಂತಿಮವಾಗಿ ಪೌರ್ವಾತ್ಯವನ್ನು ಕುರಿತ ಜ್ಞಾನವನ್ನು ಸುಸಂಘಟಿತಗೊಳಿಸಿ ವರ್ಗೀಕರಿಸುವದು ಅಧಿಕಾರವನ್ನು ಚಲಾಯಿಸುವುದಕ್ಕೆ ಒಂದು ಮಾರ್ಗ ಎಂದು ಸಯೀದ್ ಪ್ರತಿಪಾದಿಸುತ್ತಾರೆ. ಈ

ತಾರ್ಕಿಕತೆಯನ್ನೊಳಕೊಂಡ ತಂತ್ರವು ಜ್ಞಾನವೆಂಬುದು ಆರ್ಥಿಕ ಅಥವಾ ರಾಜಕೀಯ ಹಿತಾಸಕ್ತಿಗಳ ಪ್ರತಿಬಿಂಬವಾಗಿದೆ ಎಂಬ ಲೌಕಿಕವಾದಿ ನಿಲುವಿನಿಂದಲೂ ಜ್ಞಾನವು ಹಿತಾಸಕ್ತಿಗಳ ಲೇಪವಿಲ್ಲದೆ ತಟಸ್ಥವಾಗಿದೆ ಎಂಬ ಆದರ್ಶವಾದಿ ನಿಲುವಿನಿಂದಲೂ ಭಿನ್ನವಾಗಿದೆ. ಚರ್ಚೆಯೂ ಸಹ ಒಂದು ಬಗೆಯ ಜ್ಞಾನವಾಗಿದೆ, ಅದನ್ನು ಅಧಿಕಾರದ ಸೇವೆಯ ಸಾಧನವನ್ನಾಗಿ ಬಳಸುತ್ತಿಲ್ಲ; ಬದಲಿಗೆ, ಅದೇ ಒಂದು ಸ್ವರೂಪದ ಅಧಿಕಾರವಾಗಿದೆ ಎಂದು ಸಯೀದ್ ಅವರು ಫೂಕೊರನ್ನು ಅನುಮೋದಿಸಿ ಹೇಳುತ್ತಾರೆ.

ವಸಾಹತೋತ್ತರ ಸಿದ್ಧಾಂತದ ಕ್ಷೇತ್ರಕ್ಕೆ ಎರಡನೇ ಕಾಣಿಕೆ ಗಾಯತ್ರಿ ಸ್ಪಿವಾಕ್ ಅವರ ಸ್ವಲ್ಪ ಮಟ್ಟಿಗೆ ಅಂಗೀಕೃತವಾದ "ಕೆಳಸ್ತರದವರು ಮಾತನಾಡಲು ಸಾಧ್ಯವೆ?" (೧೯೮೮). ಸ್ಪಿವಾಕ್ ಅವರು ಸಯೀದ್ ಅವರ ಸಮಸ್ಯಾತ್ಮಕ ಪ್ರತಿನಿಧಿತ್ವದ ಪರಿಧಿಯೊಳಗೆ ಕಾರ್ಯ ನಿರ್ವಹಿಸಿದರೂ ಅದನ್ನು ಸಮಕಾಲೀನ ಶೈಕ್ಷಣಿಕ ಕ್ಷೇತ್ರಕ್ಕೂ ವಿಸ್ತರಿಸುತ್ತಾರೆ. ಕೆಳಗಿನ ಸ್ತರದವರ ಪಾರದರ್ಶಕ ಮಾತುಗಳನ್ನು ಸ್ಪಿವಾಕ್ ಪ್ರಶ್ನಿಸುತ್ತಾರೆ. ಸಹೃದಯ ಮನಸ್ಸಿನ ವಿದ್ವಾಂಸರು ಕೆಳಸ್ತರದ ಜನರು "ತಮ್ಮ ಪರವಾಗಿ ತಾವೇ ಮಾತನಾಡವುದನ್ನು" ಇಚ್ಛಿಸುತ್ತಾರೆ. ಮಧ್ಯವರ್ತಿಗಳನ್ನು (ಪರಿಣಿತರು, ನ್ಯಾಯಾಧೀಶರು, ಸಾಮ್ರಾಜ್ಯಶಾಹಿ ಆಡಳಿತಗಾರರು, ಸ್ಥಳೀಯ ಮೇಲ್ವರ್ಗದವರು - ಇವರನ್ನು) ತೆಗೆದುಹಾಕಿದರೆ, ಅವರ ಅನುಭವದ ಆಧಾರವನ್ನವಲಂಬಿಸಿ ಕೆಲವಾರು ವಾಸ್ತವ ಸತ್ಯಾಂಶಗಳು ಹೊರಹೊಮ್ಮುತ್ತವೆಂಬ ಭರವಸೆ ಅವರದ್ದು. ಆದರೆ ಅನುಭವವೆಂಬುದು ಪ್ರತಿನಿಧಿತ್ವದ ಮೂಲಕ ರಚಿತವಾಗಿದೆ; ಆದ್ದರಿಂದ ಪ್ರತಿನಿಧಿತ್ವದ ಸಮಸ್ಯೆಯನ್ನು ನಿರಾಕರಿಸಿದರೆ ಅದು ದೂರವಾಗುವುದಿಲ್ಲ; ಬದಲಿಗೆ ಅದನ್ನು ಗುರುತಿಸುವುದು ಕಷ್ಟವಾಗುತ್ತದೆ. ಈ ಪ್ರಬಂಧದ ಮೂಲ ವಿಷಯವೆಂದರೆ "ಪ್ರತಿನಿಧಿತ್ವವು ಇಲ್ಲವಾಗುವುದಿಲ್ಲ" . ಭಾಷೆಯನ್ನು ಒಳಕೊಂಡಂತೆ ಅಧಿಕಾರವು ಎಲ್ಲೆಡೆಯಲ್ಲೂ ಇರುವುದರಿಂದ ಪಾರದರ್ಶಕತೆ ಮತ್ತು ವಾಸ್ತವತೆಯ ದೃಢೀಕರಣ ಅಸಾಧ್ಯವಾಗುತ್ತದೆ. ಇದರ ಅರ್ಥವೆಂದರೆ, ವ್ಯಾಖ್ಯಾನದಲ್ಲಿ ಗೊಂದಲ ಮತ್ತು ವಿವಾದಗಳನ್ನೊಳಕೊಂಡ ಕಾರ್ಯದ ಅಗತ್ಯವು ಇದ್ದೇ ಇರುತ್ತದೆ.

ಸ್ಪಿವಾಕ್‌ರವರ ಕಾರ್ಯದ ಬಗೆಗಿನ ಮುಖ್ಯ ಟೀಕೆಯೆಂದರೆ ಅವರ ಬರಹಗಳಲ್ಲಿರುವ ಸಾಂದ್ರತೆಯಿಂದಾಗಿ ಅದನ್ನು ಅರ್ಥೈಸುವುದು ವಿದ್ಯಾರ್ಥಿಗಳಿಗೆ ಮತ್ತು ಕಾರ್ಯಕರ್ತರಿಗೆ ಕಷ್ಟವಾಗುತ್ತದೆ. ಶೈಕ್ಷಣಿಕ ವಲಯಗಳಲ್ಲಿ ಅವರ ಕೃತಿಗಳನ್ನು ವ್ಯಾಪಕವಾಗಿ ಉದ್ಧರಿಸಿದರೂ, ಅವುಗಳು ಅತ್ಯಂತ ಸೈದ್ಧಾಂತಿಕವಾಗಿದ್ದು, ವಿಶ್ಲೇಷಣೆ ಅಮೂರ್ತ ಸ್ವಭಾವವನ್ನು ಹೊಂದಿರುವುದರಿಂದ ಸಮಕಾಲೀನ ರಾಜಕೀಯ ಹೋರಾಟಗಳಿಗೆ ಅಪ್ರಸ್ತುತವಾಗುತ್ತದೆ ಎಂದು ವಿಮರ್ಶಕರು ಹೇಳುತ್ತಾರೆ. ಸ್ಪಿವಾಕ್ ತಾವು ಮಾರ್ಕ್ಸ್ ವಾದಿ ಸಂಪ್ರದಾಯದ ಮಿತಿಯೊಳಗೆ ಕಾರ್ಯ ನಿರ್ವಹಿಸುತ್ತಿರುವುದಾಗಿ ಹೇಳಿದರೂ, ಅವರ ಪ್ರಬಂಧಗಳು ಮಾರ್ಕ್ಸ್‌ವಾದ ದ ಮೂಲ ಲಕ್ಷಣಗಳಾದ ಭೌತಿಕವಾದ, ವಿಚಾರಶೀಲತೆ ಮತ್ತು ಪ್ರಗತಿ ಇವುಗಳ ಬಗ್ಗೆ ತಿರಸ್ಕಾರವನ್ನು ಪ್ರದರ್ಶಿಸುತ್ತವೆ ಎಂದು ಐಜಾಜ್ ಅಹಮದ್ ವಾದಿಸುತ್ತಾರೆ (ಅಹಮದ್ ೧೯೯೭). ಐಜಾಜ್ ಅಹಮದ್ ಅವರ ಪ್ರಕಾರ ಸ್ಪಿವಾಕ್ ಅವರು ಬಂಡವಾಳವಾದದ ಸಾಂಸ್ಥಿಕರಚನೆಗಳು ಮತ್ತು ಅದರ ಉತ್ಪಾದನಾ ವಿಧಾನದ ಭೌತಿಕ ಪರಿಣಾಮಗಳಿಗಿಂತ ಹೆಚ್ಚಾಗಿ ಬಂಡವಾಳವಾದದ ನಿರೂಪಣೆಗಳಿಗೆ ಹೆಚ್ಚು ಒತ್ತು ಕೊಡುತ್ತಾರೆ. ಕೆಳಸ್ತರದ ಪ್ರಜೆಗಳ ಒಳಕೊಳ್ಳುವಿಕೆ ಅನಿವಾರ್ಯವಾಗಿರುವ ಚಳುವಳಿಗಳ ಮೇಲಿನ ಸ್ಪಿವಾಕ್‌ರವರ ತೀಕ್ಷ್ಣ ಟೀಕೆಯನ್ನು ಮಾರ್ಕ್ಸ್ ವಾದಿ ರಾಜಕೀಯದ ಮೂಲ ನೆಲೆಯ ಮೇಲಿನ ಟೀಕೆಯೆಂದು ಸಹ ಪರಿಗಣಿಸಬಹುದು; ಏಕೆಂದರೆ, ಬಂಡವಾಳಶಾಹಿ ವ್ಯವಸ್ಥೆಯು ಉತ್ಪತ್ತಿ ಮಾಡುವ ಪ್ರೊಲಿಟೇರಿಯಟ್ (ಕಾರ್ಮಿಕ ವರ್ಗ) ಒಂದು ವರ್ಗವಾಗಿ ತನ್ನ ನೈಜ ಹಿತಾಸಕ್ತಿಗಳನ್ನು ಹಂಚಿಕೊಳ್ಳುತ್ತದೆಯಾದ್ದರಿಂದ ಅದಕ್ಕೆ ಮಾರ್ಕ್ಸ್‌ವಾದವು ವಿಶೇಷ ಹಕ್ಕುಗಳನ್ನು ಕೊಡಮಾಡಿದೆ. ಈ ಚರ್ಚೆಯು ವಸಾಹತೋತ್ತರ ಅಧ್ಯಯನ ಕ್ಷೇತ್ರದಲ್ಲಿ ಹರಿದಾಡುತ್ತಿರುವ

ಒಂದು ಬಗೆಯ ತಲ್ಲಣವನ್ನು ಪ್ರತಿಬಿಂಬಿಸುತ್ತದೆ. ಕೆಲವು ಚಿಂತಕರು ಮಾರ್ಕ್ಸ್‌ವಾದ ಮತ್ತು ಸಂರಚನೋತ್ತರವಾದಗಳೆರಡರ ಮೇಲೂ ಗಮನಹರಿಸುತ್ತಾರೆ. ಆದರೆ ಇವೆರಡೂ ಸಿದ್ಧಾಂತಗಳು ವಿಭಿನ್ನ ಆಸಕ್ತಿಗಳು, ವಿಧಾನಗಳು ಮತ್ತು ಗ್ರಹಿಕೆಗಳನ್ನು ಹೊಂದಿವೆ. ಮಾನವಿಕ ಶಾಸ್ತ್ರಗಳಲ್ಲಿ ವಸಾಹತೋತ್ತರ ಸಿದ್ಧಾಂತವು ಸಂರಚನೋತ್ತರವಾದದ ಚಿಂತನೆಯ ಪ್ರಭಾವವನ್ನು ಪ್ರತಿಬಿಂಬಿಸಿದರೂ, ನಿರ್ವಸಾಹತೀಕರಣದ ಸಿದ್ಧಾಂತಿಗಳು ಸಾಮಾಜಿಕ ಇತಿಹಾಸ, ಅರ್ಥಶಾಸ್ತ್ರ ಮತ್ತು ರಾಜಕೀಯ ಸಂಸ್ಥೆಗಳ ಮೇಲೆ ಗಮನ ಹರಿಸುತ್ತಾರೆ. ವಸಾಹತೋತ್ತರ ಸಿದ್ಧಾಂತವು, ಪೂರ್ವ ಹಾಗೂ ಪಶ್ಚಿಮದ ಸಂಸ್ಕೃತಿಗಳ ಮಿಶ್ರಣ, ವಲಸೆಹೋಗಿರುವ ಸಮುದಾಯ, ಪ್ರತಿನಿಧಿತ್ವ, ನಿರೂಪಣೆಗಳು ಮತ್ತು ಜ್ಞಾನ/ಅಧಿಕಾರ ಈ ಅಂಶಗಳನ್ನು ಒಳಕೊಂಡಿದ್ದರೆ, ನಿರ್ವಸಾಹಿತೀಕರಣ ಸಿದ್ಧಾಂತವು ಕ್ರಾಂತಿ, ಆರ್ಥಿಕ ಅಸಮಾನತೆ, ಹಿಂಸಾಚಾರ ಮತ್ತು ರಾಜಕೀಯ ಅಸ್ಮಿತೆ ಇವುಗಳ ಬಗ್ಗೆ ಗಮನಹರಿಹಿಸಿದೆ (ಕೋಹ್ನ್ ೨೦೦೦).

ಕೆಲವು ವಿದ್ವಾಂಸರು ವಸಾಹತೋತ್ತರ ಸಿದ್ಧಾಂತದ ಪರಿಕಲ್ಪನೆಯ ಉಪಯುಕ್ತತೆಯನ್ನು ಪ್ರಶ್ನಿಸಲಾರಂಭಿಸಿದ್ದಾರೆ. ನಾಲ್ಕು ಹಂತಗಳ ಸ್ಕಾಟಿಷ್ ಸಿದ್ಧಾಂತದ ವಿಚಾರದಂತೆಯೇ ಅದರೊಂದಿಗೆ ಯಾವುದೇ ಸಾಮ್ಯತೆಯನ್ನು ಹೊಂದಿರದ ವಸಾಹತೋತ್ತರ ಸಿದ್ಧಾಂತವು ಇತಿಹಾಸದ ಪ್ರಗತಿಪರ ತಿಳುವಳಿಕೆಯನ್ನು ಅವಲಂಬಿಸಿರುವಂತೆ ಕಾಣಿಸುತ್ತದೆ. (ಮೆಕ್ ಕ್ಲಿಂಟಾಕ್ ೧೯೯೨). ಮೂಲ ಪರಿಕಲ್ಪನೆಗಳಾದ ಪೂರ್ವ-ಪಶ್ಚಿಮಗಳ ಸಾಂಸ್ಕೃತಿಕ ಮಿಶ್ರಣ, ಪಲ್ಲಟತ್ವ, ನಿರ್ದಿಷ್ಟತೆ ಮತ್ತು ಅನೇಕತ್ವಗಳು ಒಂದು ರೀತಿಯ ವೈಧಾನಿಕಶಾಸ್ತ್ರಾಂಧತೆಗೆ ಎಡೆಮಾಡಿಕೊಡುವುದೆಂದು ವಸಾಹತೋತ್ತರ ವಾದವು ತನಗೆ ಅರಿವಿಲ್ಲದೆಯೇ ಸೂಚಿಸುತ್ತದೆ. 'ವಸಾಹತಿಗೆ ಒಳಪಟ್ಟ ' ಎಂಬ ಉಕ್ತಿಯು ವಿದೇಶೀ ಆಧಿಪತ್ಯಕ್ಕೆ ಒಳಗಾಗಿ ವಿಭಿನ್ನವಾದ ಅನುಭವಗಳನ್ನು ಹೊಂದಿರುವ ವಿವಿಧ ದೇಶಗಳಲ್ಲಿ ಇದೆಯೆಂಬ - ಆದರೆ, ಐತಿಹಾಸಿಕವಾಗಿ ಅಸಂಭವನೀಯವಾಗಿರುವ - ಸಾಧ್ಯತೆಗಳನ್ನು ಸೂಚಿಸಿರುವುದರಿಂದ, ಅದನ್ನು ಅರ್ಥಮಾಡಿಕೊಳ್ಳುವುದರಲ್ಲಿ ಸಮಸ್ಯೆಯುಂಟಾಗುತ್ತದೆ. ವಸಾಹತೋತ್ತರ ಸಿದ್ಧಾಂತದ ವಿಮರ್ಶಾತ್ಮಕ ಪ್ರಚೋದನೆಯ ಪ್ರವೃತ್ತಿ ಅದರ ವಿರುದ್ಧವೆ ತಿರುಗಿದೆ. ಅದು ಸಾಮ್ರಾಜ್ಯಶಾಹಿಯ ತಲ್ಲಣಗಳನ್ನು ಮೀರಿ ಬೆಳೆಯುವ ಆದರ್ಶವಾದಿ ಹಂಬಲಗಳನ್ನು ಪ್ರದರ್ಶಿಸಿದೆ (ಗಾಂಧಿ ೧೯೯೮).

## Bibliography

Ahmad, Aijaz, 1994. *In Theory: Classes, Nations, Literaturess*, London: Verso.
Burke, Edmund, 2000. *On Empire, Liberty and Reform: Speeches and Letters*, David Bromwich (ed.), New Haven: Yale University Press.
Gandhi, Leela, 1988. *Postcolonial Theory: A Critical Introduction*, New York: Columbia University Press.
Guha, Ranajit and Spivak, Gayatri, 1988. *Selected Subaltern Studies*, New York and Oxford: Oxford University Press.
Kohn, Margaret, 2010. "Post-colonial Theory," in Duncan Bell (ed.), *Ethics and World Politics*, Oxford: Oxford University Press, pp. 200–218.
Kohn, Margaret and O'Neill, Daniel, 2006. "A Tale of Two Indias: Burke and Mill on Racism and Slavery in the West Indies," *Political Theory*, 34: 192–228.
Marx, Karl, 1972. *On Colonialism: Articles from the New York Tribune and other writings*, New York: International Publishers.
McClintock, Anne, 1992, "The Angel of Progress: Pitfalls of the Term 'Post-Colonialism," *Social Text*, 31/32: 84–98.
Mehta, Uday, 1999. *Liberalism and Empire: A Study in Nineteenth-Century British Liberal Thought*, Chicago: University of Chicago Press.
Mill, John Stuart, 1861. *Considerations on Representative Government*, in *Collected Works of John Stuart Mill* (Volume XIX), John Robinson (ed.), Toronto: University of Toronto Press, 1963, pp. 371–577.
Muthu, Sankar, 2003. *Enlightenment Against Empire*, Princeton, NJ: Princeton University Press.
Pagden, Anthony, 1990. *Spanish Imperialism and Political Imagination*, New Haven, CT: Yale University Press.
Pitts, Jennifer, 2005. *A Turn To Empire: The Rise of Imperial Liberalism in Britain and France*, Princeton and Oxford: Princeton University Press.
Tocqueville, Alexis, 2001. *Writings on Empire and Slavery*, Jennifer Pitts (ed. and trans.), Baltimore, MD: Johns Hopkins University Press.
Said, Edward, 1979. *Orientalism*, New York: Vintage.





Spivak, Gayatri, 1988. "Can the Subaltern Speak?," in C. Nelson and L. Grossberg (eds.), *Marxism and the Interpretation of Culture*, Urbana: University of Illinois Press, pp. 271–313.
Victoria, Franciscus de, 1917. *On the Indians Lately Discovered*, E. Nys (ed.), Washington: Carnegie Institute.
Wallerstein, Immanuel, 1974–1989. *The Modern World System*, 3 volumes, New York: Academic Press.
Williams, Robert, 1990. *The American Indian in Western Legal Thought*, New York and Oxford: Oxford University Press.
Young, Robert, 2001. *Postcolonialism: An Historical Introduction*, Oxford: Blackwell.

ಈ ವಿಷಯದ ಜುಲೈ ೨೦೧೧ರ ನವೀಕರಣದಲ್ಲಿನ ಒಂದು ಕಂಡಿಕೆಯನ್ನು ಲೇಖಕರ ಪ್ರಬಂಧದಿಂದ ತೆಗೆದುಕೊಳ್ಳಲಾಗಿದೆ. ಕೊಹ್‌ನ್, ೨೦೧೦, ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಮುದ್ರಣಾಲಯದಿಂದ ಮೊದಲು ಪ್ರಕಟವಾಯಿತು.

ಕೃತಿಸ್ವಾಮ್ಯದ ಹಕ್ಕು ೨೦೧೨

ಮಾರ್ಗರೇಟ್ ಕೊಹ್‌ನ್ (ಇohಟಿ@uಣsಛಿ.uಣoಡಿoಟಿಣo.ಛಿಚಿ)

ವಿಶ್ವದ ಎಲ್ಲೆಡೆಯಿಂದ ಪಡೆದ ಧನಸಹಾಯದಿಂದ ಈ ಎಸ್‌ಇಪಿಯನ್ನು ಎಲ್ಲರಿಗೂ ಮುಕ್ತವಾಗಿರಿಸಲು ಸಾಧ್ಯವಾಗಿದೆ ವಿಶ್ವಕೋಶವನ್ನು ಮುಕ್ತವಾಗಿರಿಸಲು ನೀವು ಹೇಗೆ ಸಹಾಯ ಮಾಡಬಹುದೆಂಬುದರ ಬಗೆಗೆ ದಯವಿಟ್ಟು ಓದಿ.

ಸ್ಟಾನ್‌ಫೋರ್ಡ್: ಭಾಷೆ ಮತ್ತು ಮಾಹಿತಿ ಅಧ್ಯಯನ ಕೇಂದ್ರ

ಸ್ಟಾನ್ ಫೋರ್ಡ್ ಈ ತತ್ವಶಾಸ್ತ್ರದ ವಿಶ್ವಕೋಶದ ಕೃತಿಸ್ವಾಮ್ಯದ ಹಕ್ಕು @ ೨೦೧೬ ಅಧ್ಯಾತ್ಮ ಸಿದ್ಧಾಂತದ ಸಂಶೋಧನ ಪ್ರಯೋಗಾಲಯ, ಭಾಷೆ ಹಾಗೂ ಮಾಹಿತಿ ಅಧ್ಯಯನ ಕೇಂದ್ರ, ಸ್ಟಾನ್‌ಫೋರ್ಡ್ ವಿಶ್ವವಿದ್ಯಾಲಯಕ್ಕೆ ಸೇರಿದುದಾಗಿರುತ್ತದೆ.

-